


# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor: MARUTIBASAVANTAPPAHOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SK NEWS ಕನ್ನಡ

SIHI KAHI

KANNADA DAILY MORNING

BAGALKOT

Volume : 07 Issue : 06 Friday 06-09-2024 E-mail : maruti.b.hosamani76@gmail.com Page: 4 Price : Rs. 1/-


# ಸ್ಕೂಲ್ ಬಸ್ ಮತ್ತು ಸರ್ಕಾರಿ ನಡುವೆ ಡಿಕ್ಕಿ

## ಇಬ್ಬರು ಮಕ್ಕಳು ಸಾವು – ಹಲವರಿಗೆ ಗಂಭೀರ ಗಾಯ





ಸಿಹಿ–ಕಹಿ ಸುದ್ದಿ,

ಮಸ್ಕಿ : ಮಾನ್ವಿ ಪಟ್ಟಣದ ಕಪಗಲ್ ದೊಡ್ಡ ಹಳ್ಳದ ಹತ್ತಿರ ಲಾಯೋಲ್ ಶಿಕ್ಷಣ ಸಂಸ್ಥೆಯ ಶಾಲಾ ವಾಹನ ಹಾಗೂ ಕಲ್ಯಾಣ ಕರ್ನಾಟಕ ಸಾರಿಗೆ ಬಸ್ ಪರಸ್ಪರ ಮುಖಾ ಮುಖಿ ಡಿಕ್ಕಿ ಹೊಡೆದ ಪರಿಣಾಮವಾಗಿ ಲಾಯೋಲ ಶಿಕ್ಷಣ ಸಂಸ್ಥೆಗೆ ಸೇರಿದ ಶಾಲಾ ವಾಹನದಲ್ಲಿದ್ದ 20 ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಗಂಭೀರವಾಗಿ ಗಾಯಗಳಾಗಿದ್ದು ಅದರಲ್ಲಿ 7 ವಿದ್ಯಾರ್ಥಿಗಳಿಗೆ ಕಾಲುಗಳು ತುಂಡಾಗಿರುವ ಭೀಕರ ಘಟನೆ ನಡೆದಿದೆ. ಸಾರ್ವಜನಿಕ ಸಮಯಗಳು ಅಪಘಾತ ಗಂಭೀರವಾಗಿ ಗಾಯ ಗೊಂಡಿದ್ದ ಎರಡು ವಿದ್ಯಾರ್ಥಿಗಳು ಚಿಕಿತ್ಸೆ ಫಲಿಸದೇ ಮೃತ ಪಟ್ಟಿದ್ದಾರೆ ಎನ್ನಲಾಗಿದೆ. ಇನ್ನುಳಿದ ವಿದ್ಯಾರ್ಥಿಗಳ ಚಿಕಿತ್ಸೆ ಮುಂದುವರೆದಿದೆ. ಬಸ್ ನಲ್ಲಿ ಪ್ರಯಾಣಿಸುತ್ತಿದ್ದ ಪ್ರಯಾಣಿಕರಲ್ಲಿ 23 ಕ್ಕೂ ಹೆಚ್ಚು ಪ್ರಯಾಣಿಕರಿಗೆ ಸಣ್ಣ ಪುಟ್ಟ ಗಾಯಗಳಾಗಿದ್ದು ಕಲ್ಲೂರು ಹಾಗೂ ಮಾನ್ವಿ ಸರಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಲಾಗಿದೆ. ಇನ್ನುಳಿದ ವಿದ್ಯಾರ್ಥಿಗಳ ಚಿಕಿತ್ಸೆ ಮುಂದುವರೆದಿದೆ. ಬಸ್ ನಲ್ಲಿ ಪ್ರಯಾಣಿಸುತ್ತಿದ್ದ ಪ್ರಯಾಣಿಕರಲ್ಲಿ 23 ಕ್ಕೂ ಹೆಚ್ಚು ಪ್ರಯಾಣಿಕರಿಗೆ ಸಣ್ಣ ಪುಟ್ಟ ಗಾಯಗಳಾಗಿದ್ದು ಕಲ್ಲೂರು ಹಾಗೂ ಮಾನ್ವಿಯ ಸರಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಲಾಗಿದೆ. ಮಾನ್ವಿ ಪಟ್ಟಣದಲ್ಲಿನ ಲಾಯೋಲ ಶಿಕ್ಷಣ ಸಂಸ್ಥೆಯಲ್ಲಿನ ಪ್ರಾಥಮಿಕ ಶಾಲೆಯಲ್ಲಿ ಅಭ್ಯಾಸ ಮಾಡುತ್ತಿದ್ದ ಕುರ್ಡಿ, ಹೊಕ್ರಾಣಿ, ಕಂಬಳತಿ, ಕಪಗಲ್, ಭಾಗದ ವಿದ್ಯಾರ್ಥಿಗಳನ್ನು ಮಾನ್ವಿ ಶಾಲೆಗೆ ಕರೆದುಕೊಂಡು ಬರುತ್ತಿರುವಾಗ ಮಾನ್ವಿ ಯಿಂದ ರಾಯಚೂರುಗೆ ಹೋಗುತ್ತಿದ್ದ ಕಲ್ಯಾಣ ಕರ್ನಾಟಕ ಸಾರಿಗೆ ಬಸ್ ಮುಖಾ ಮುಖಿ ಡಿಕ್ಕಿ ಸಂಭವಿಸಿದ ರಿಂದ ಈ ಅವಘಡ ನಡೆದಿದೆ.

ತಾಲೂಕ ವರದಿಗಾರರು,
ಸಿಹಿ ಕಹಿ ಕನ್ನಡ ದಿನ ಪತ್ರಿಕೆ
ಹಾಗೂ ಎಸ್.ಕೆ ನ್ಯೂಸ್
ಕನ್ನಡ ಚಾನಲ್: ಪ್ರತಾಪ್.
ವಾಯ್.ಕಿಳ್ಳಿ.ಇಲಕಲ್ಲ.

# ಕ್ಷೇತ್ರದ ಪ್ರತಿ ಗ್ರಾಮ ಗ್ರಾಮಗಳಿಗೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಒತ್ತು ಕೊಡವೆ–ಶಾಸಕ ಡಾ. ಶ್ರೀನಿವಾಸ್ ಎನ್.ಟಿ



**ಕೂಡ್ಲಿಗಿ :** ಕ್ಷೇತ್ರದ ಮಾನ್ಯ ಶಾಸಕರಾದ ಡಾ. ಶ್ರೀನಿವಾಸ್ ಎನ್.ಟಿ. ಅವರು ಬುಧವಾರ ರಂದು 2023–24 ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಯೋಜನೆ ಅಡಿಯಲ್ಲಿ ನಿರ್ಮಿಸಲಾದ ಪಾಲಯ್ಯನ ಕೋಟೆ, ಸೂಲದಹಳ್ಳಿ, ಗುಣಸಾಗರ, ಗ್ರಾಮಗಳಲ್ಲಿ ಸಿ. ಸಿ. ರಸ್ತೆ ನಿರ್ಮಾಣದ ಭೂಮಿ ಪೂಜೆಯನ್ನು ನೆರವೇರಿಸಿ ಮಾತನಾಡಿದರು.

ನಮ್ಮ ಕ್ಷೇತ್ರದಲ್ಲಿ ಬರುವ ಪ್ರತಿ ಗ್ರಾಮ ಗ್ರಾಮಗಳಿಗೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಒತ್ತು ಕೊಡುತ್ತಾ ಯಾವುದೇ ಹಳ್ಳಿಗಳನ್ನು ಕಡೆ ಗಣಿಸದೇ ಸರ್ವ ರೀತಿಯಲ್ಲಿ ಆಯಾ ಗ್ರಾಮದ ರಸ್ತೆ, ಚರಂಡಿ ವ್ಯವಸ್ಥೆ, ಕುಡಿಯುವ ನೀರು, ವಿದ್ಯುತ್ , ಗ್ರಾಮದ ಸ್ವಚ್ಚತೆ ಇನ್ನೂ ಹೆಚ್ಚಾಗಿ ಅಭಿವೃದ್ಧಿಗೆ ಒತ್ತು ಕೊಡುವೆ ಎಂದರು. ಹಾಗೆಯೇ ತಮ್ಮೆಲ್ಲರ ಆಶೀರ್ವಾದ ದೊಂದಿಗೆ ಈ ಕ್ಷೇತ್ರದ ಶಾಸಕರಾಗಿ ಮಾಡಿರುವ ತಮ್ಮಗಳ ಅಭಿಮಾನ ಮತ್ತು ನಂಬಿಕೆ ನಮ್ಮ ಮೇಲೆ ಇರಲಿ. ಮುಂದಿನ ದಿನಗಳಲ್ಲಿ ಈ ಭಾಗದ ಜನಗಳು ಮುಂದಿನ ದಿನಗಲ್ಲಿ ಗುಳೇ ಹೋಗುವುದನ್ನು ತಪ್ಪಿಸುತ್ತೇನೆ ಎಂದು ಆಶ್ವಾಸನೆ ನೀಡಿದರು. ಗ್ರಾಮದ ಅಭಿವೃದ್ಧಿಗೆ ಸಂಬಂಧಿಸಿದಂತೆ ಗ್ರಾಮಸ್ಥರಿಂದ ಮನವಿಯನ್ನು ಶಾಸಕರು ಸ್ವೀಕರಿಸಿದರು. ಈ ಸಂದರ್ಭದಲ್ಲಿ ಸೂಲದಹಳ್ಳಿ ಗ್ರಾ. ಪಂ. ಅಧ್ಯಕ್ಷರಾದ ರತ್ನಮ್ಮ ರಾಮಯ್ಯ ಅವರು, ಸದಸ್ಯರು, ಗುತ್ತಿಗೆದಾರರು ಮತ್ತು ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ರಾಘವೇಂದ್ರ.ಬಿ.ಸಾಲುಮನೆ.ಕೂಡ್ಲಿಗಿ.ವಿಜಯನಗರ.**

# ಪತ್ರಕರ್ತರ ರೈಲ್ವೆ ಪಾಸನ್ನು ಪುನಾರಂಭಿಸವಂತೆ ಸಂಪಾದಕರ ಸಂಘದಿಂದ ರೈಲ್ವೆ ಸಚಿವರಿಗೆ ಮನವಿ ಸಲ್ಲಿಕೆ



**ರಾಯಚೂರು :** ಕೋವಿಡ್–19 ಸಂದರ್ಭದಲ್ಲಿ ಸ್ಥಗಿತಗೊಂಡಿದ್ದ ಪತ್ರಕರ್ತರ ರೈಲ್ವೆಯ ಪಾಸನ್ನು ಪುನಾರಂಭಿಸವಂತೆ ರೈಲ್ವೆ ಕೇಂದ್ರ ಖಾತೆ ರಾಜ್ಯ ಸಚಿವರಾದ ವಿ. ಸೋಮಣ್ಣ ಅವರಿಗೆ ಕರ್ನಾಟಕ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘದ ಪದಾಧಿಕಾರಿಗಳು ಮನವಿ ಸಲ್ಲಿಸಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿರುವ ದಿನಪತ್ರಿಕೆಗಳ ಸಂಪಾದಕರು ಸೇರಿ–ಕೊಂಡು ಸ್ಥಾಪಿಸಿರುವ ಕರ್ನಾಟಕದ ಏಕೈಕ ಸಂಪಾದಕರ ಸಂಘವಾಗಿದೆ. ಕೋವಿಡ್–19 ಸಂದರ್ಭದಲ್ಲಿ ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಪತ್ರಕರ್ತರಿಗೆ ವಿತರಿಸುತ್ತಿದ್ದ ರೈಲ್ವೆ ಪಾಸ್ನ್ನು ಸ್ಥಗಿತಗೊಳಿಸಲಾಗಿತ್ತು. ಆದರೆ, ಈಗ ಕೋವಿಡ್–19 ಅಲೆ ಮುಕ್ತಾಯಗೊಂಡು 3–4 ವರ್ಷಗಳು ಗತಿಸಿದರೂ ಸಹ ಈವರೆಗೂ ಸದರಿ ರೈಲ್ವೆ ಇಲಾಖೆಯಿಂದ ಪಾಸ್ಗಳನ್ನು ಪುನರಾರಂಭಿಸಿರುವುದಿಲ್ಲ. ಇದರಿಂದಾಗಿ ಮಾನ್ಯತೆ ಹೊಂದಿದ ಪತ್ರಕರ್ತರಿಗೆ ರೈಲು ಪ್ರಯಾಣ ಮರೀಚಿಕೆಯಾಗಿದೆ. ದೂರದ ಪ್ರಯಾಣಗಳಿಗೆ ಕೇವಲ ಬಸ್ಸಗಳನ್ನಷ್ಟೇ ಅವಲಂಬಿಸುವ ಪರಿಸ್ಥಿತಿ ಉಂಟಾಗಿದೆ.

ಆದಕಾರಣ, ತಾವುಗಳು ರೈಲ್ವೆ ಇಲಾಖೆಯಿಂದ ಮಾನ್ಯತೆ ಪಡೆದ ಪತ್ರಕರ್ತರಿಗೆ ಸ್ಥಗಿತಗೊಳಿಸಿದ್ದ ರೈಲ್ವೆ ಪಾಸ್ನ್ನು ಪುನಃ ಪ್ರಾರಂಭಿಸಿ ಪತ್ರಕರ್ತರಿಗೆ ಅನುಕೂಲತೆ ಕಲ್ಪಿಸಿಕೊಡಬೇಕೆಂದು ನೀಡಿರುವ ಮನವಿಯಲ್ಲಿ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ. ಚನ್ನಬಸವ ಬಾಗಲವಾಡ, ಕರ್ನಾಟಕ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘದ ಖಜಾಂಚಿಗಳಾದ ಖಾನಸಾಬ್ ಮೋಮಿನ್, ಸೇರಿದಂತೆ ಸಂಘದ ಇನ್ನಿತರ ಪದಾಧಿಕಾರಿಗಳು ಇದ್ದರು.

# ಯಾದವಾಡದಲ್ಲಿ ನಿವೃತ್ತ ಬ್ರಿಗೇಡಿಯರ್ ಸುಧೀಂದ್ರ ಇಟ್ನಾಳ್ ದಂಪತಿಗಳಿಗೆ ಸನ್ಮಾನ

**ಮೂಡಲಗಿ :** ಸೈನಿಕ ಶಾಲೆಗಳಲ್ಲಿ ಓದುವ ಮಕ್ಕಳಿಗೆ ದೈಹಿಕ ಆರೋಗ್ಯ, ಮಾನಸಿಕ ಶಕ್ತಿ ಹಾಗೂ ದೃಢತೆಯ ಬೆಳವಣಿಗೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. ಇದೇ ಮಾದರಿಯ ಶಿಕ್ಷಣವನ್ನು ದೇಶದ ಎಲ್ಲ ಮಾಧ್ಯಮಿಕ ಶಾಲೆಗಳಲ್ಲಿ ನೀಡುವ ವ್ಯವಸ್ಥೆ ಆಗಬೇಕು. ಮಗು ಪರೀಕ್ಷೆಯಲ್ಲಿ ಅಂಕ ಗಳಿಸುವುದು ಮುಖ್ಯವಲ್ಲ. ಮಗು ದೈಹಿಕವಾಗಿ ಮಾನಸಿಕವಾಗಿ ಸಮರ್ಥವಾಗಿರುವುದು ಮೊದಲು ಆದ್ಯತೆಯಾಗಬೇಕು. ಪಾಲಕರಲ್ಲಿಯೂ ಜಾಗೃತಿ ಮೂಡಿಸಬೇಕು ಎಂದು ನಿವೃತ್ತ ಬ್ರಿಗೇಡಿಯರ್ ಸುಧೀಂದ್ರ ಇಟ್ನಾಳ ಹೇಳಿದರು

ಯಾದವಾಡ ಗ್ರಾಮದಲ್ಲಿ ಭಾವೈಕ್ಯ ಬಳಗ ಏರ್ಪಡಿಸಿದ್ದ ಪ್ರವಚನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಪಾಲಕರು ಹಾಗೂ ಶಿಕ್ಷಕರು ಮಗುವಿನ ಆರೋಗ್ಯ ಪೂರ್ಣ ಬೆಳವಣಿಗೆ ಮತ್ತು ಮಾನಸಿಕ ದೃಢತೆಯ ಬೆಳವಣಿಗೆಗೆ ಹೆಚ್ಚಿನ ಆದ್ಯತೆ ಕೊಡಬೇಕು ಇದರಿಂದ ಮಗು ಉತ್ತಮ ನಾಗರಿಕನಾಗಿ ರೂಪಗೊಳ್ಳುತ್ತಾನೆ ಎಂದರು.

ಇದೇ ಸಂದರ್ಭದಲ್ಲಿ ಸುಧೀಂದ್ರ ಇಟ್ನಾಳ್ ಹಾಗೂ ಅವರ ಪತ್ನಿ ಅಂಜಲಿ ಅವರನ್ನು ನಾಗರಿಕರ ಪರವಾಗಿ ಸನ್ಮಾನಿಸಲಾಯಿತು.

ಪ್ರವಚನಕಾರ ಸಂತೋಷ ಕುಮಾರ ಶಾಸ್ತ್ರಿ ಅಧ್ಯಕ್ಷತೆ ವಹಿಸಿದ್ದರು. ಸಮಾಜಿಕ ಕಾರ್ಯಕರ್ತ ಈಶ್ವರ ಕತ್ತಿ ಮತ್ತು ಬಿ ಬಿ ಕಲ್ಯಾಣಿ ಮಾತನಾಡಿದರು. ಮಾರುತಿ ಕರೆಯಣ್ಣವರ ಕಾರ್ಯಕ್ರಮ ನಿರೂಪಿಸಿದರು.




# ಇಂದಿರಾ ಕ್ಯಾಂಟಿನ್‌ಗೆ ಶಂಕುಸ್ಥಾಪನೆ ಯೋಜನೆ ಸದುಪಯೋಗಗೊಳ್ಳಲಿ–ಸವದಿ



**ತೇರದಾಳ :** ಸರಕಾರದ ಯೋಜನೆಗಳು ಸದುಪಯೋಗಗೊಂಡಾಗ ಮಾತ್ರ ಯೋಜನೆಗಳನ್ನು ಅನುಷ್ಠಾನಗೊಳಿಸಿರುವುದಕ್ಕೆ ಸಾರ್ಥಕ ಆಗುತ್ತದೆ ಎಂದು ಶಾಸಕ ಸಿದ್ದು ಸವದಿ ಹೇಳಿದರು.

ಶುಕ್ರವಾರ ಸಂಜೆ ಪಟ್ಟಣದ ಪುರಸಭೆ ಹಳೆ ಕಟ್ಟಡದ ಹಿಂಬದಿಯಲ್ಲಿ ಸರಕಾರದ ಮಹತ್ವಕಾಂಕ್ಷಿ ಯೋಜನೆಯಾದ ಇಂದಿರಾ ಕ್ಯಾಂಟಿನ್ ಸ್ಥಾಪನೆಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದರು.

ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ, ಸರಕಾರದ ಹಿಂದುಳಿದ, ಬಡವರ ಹಾಗೂ ಶೋಷಿತರು ಸೇರಿದಂತೆ ಯಾರು ಹಸಿವಿನಿಂದ ಬಳಲಬಾರದು ಎಂಬ ಸದುದ್ದೇಶದಿಂದ ಇಂದಿರಾ ಕ್ಯಾಂಟಿನ್ ರಾಜ್ಯಾದ್ಯಂತ ಪ್ರಾರಂಭಿಸುತ್ತಿದೆ. ಅದರಂತೆ ತೇರದಾಳದಲ್ಲಿಯೂ ಪ್ರಾರಂಭಿಸಲಾಗುತ್ತಿದೆ ಎಂದು ಹೇಳಿದರು. ಪುರಸಭೆ ಅಧ್ಯಕ್ಷೆ ಶಿಲ್ಪಾ ರೋಡಕರ, ಉಪಾಧ್ಯಕ್ಷೆ ನಸ್ರಿನ್‌ಬಾನು ನಗಾರ್ಜಿ, ಕಾಂಗ್ರೆಸ್ ನಗರ ಘಟಕ ಅಧ್ಯಕ್ಷ ಅಶೋಕ ಆಳಗೊಂಡ, ಬಿಜೆಪಿ ಅಧ್ಯಕ್ಷ ಮಹಾವೀರ ಕೊಕಟನೂರ, ಪುರಸಭೆ ಸದಸ್ಯರಾದ ಸುರೇಶ ಕಬಾಡಗಿ, ಸಚಿನ ಕೊಡತೆ, ಕುಮಾರ ಸರಿಕರ, ಪಯಾಜ್ ಇನಾಂದಾರ, ಕೇದಾರಿ ಪಾಟೀಲ, ಸಂಗಮೇಶ ಕಾಲತಿಪ್ಪಿ, ಸದಾಶಿವ ಹೊಸಮನಿ, ಮುಖ್ಯಾಧಿಕಾರಿ ಆನಂದ ಕೆಸರಗೊಪ್ಪ, ಕಚೇರಿ ವ್ಯವಸ್ಥಾಪಕ ಮಲ್ಲಿಕಾರ್ಜುನ ಬಿರಾದಾರ ಪಾಟೀಲ, ಅಜೀತ ಮಗದುಂ, ಶಂಕರ ಕುಂಬಾರ, ಪಿ.ಎಸ್. ಮಾಸ್ತಿ ಇನ್ನಿತರಿದ್ದರು.

# ಅನಾಮಧೇಯ ಮಹಿಳೆ ಶವ ಪತ್ತೆ

**ಕೊಪ್ಪಳ :** ಜಿಲ್ಲೆಯ ಗಂಗಾವತಿಯ ತಾಲ್ಲೂಕಿನ ವಿರುಪಾಪುರ ಗಡ್ಡಿಯ ನದಿಯ ಅಡಕಲ್ಲು ಗುಂಡಿನ ಹತ್ತಿರ ಅನಾಮಧೇಯ ಮಹಿಳೆಯ ಶವ ಪತ್ತೆಯಾಗಿದ್ದು, ಗಂಗಾವತಿಯ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಗುನ್ನೆ ನಂ:21/2024 ಕಲಂ 194(3)(6) ಬಿ.ಎನ್.ಎಸ್.ಎಸ್ 2023 ಅಡಿ ಪ್ರಕರಣ ದಾಖಲಾಗಿದೆ.

2024ರ ಜುಲೈ 03ರಂದು ವಿರುಪಾಪುರ ಗಡ್ಡಿಯ ನದಿಯ ಅಡಕಲ್ಲು ಗುಂಡಿನ ಹತ್ತಿರ ಅನಾಮಧೇಯ ಮಹಿಳೆಯ ಶವ ಕಂಡು ಬಂದ ಹಿನ್ನೆಲೆಯಲ್ಲಿ ವಿರುಪಾಪೂರು ಗ್ರಾಮದ ಪರಶುರಾಮ ಎಂಬುವರು ಗಂಗಾವತಿಯ ಗ್ರಾಮೀಣ ಪೊಲೀಸ್ ಠಾಣೆಗೆ ಮಾಹಿತಿ ನೀಡಿರುತ್ತಾರೆ. ಈ ಮಹಿಳೆಯು ಸುಮಾರು 15 ರಿಂದ 20 ದಿನಗಳ ಹಿಂದೆ ಬಿದ್ದಿರುವಂತೆ ಮಹಿಳೆಯ ದೇಹದ ಕೆಳಗಿನ ಭಾಗ ಕೈ.ಕಾಲುಗಳು ಹಾಗೂ ಇತರೆ ಕಡೆಗಳಲ್ಲಿ ಯಾವುದೋ ಪ್ರಾಣಿ ತಿಂದಂತೆ ಮತ್ತು ಶವವು ಸಂಪೂರ್ಣ ಕೊಳೆತಿದೆ. ಮೃತ ಮಹಿಳೆಯ ಎಡಗೈ ಮೇಲೆ ಅಮ್ಮ ಅಂತಾ ಹಚ್ಚೆ ಇದ್ದು, ಈ ಮೃತ ಮಹಿಳೆಯ ಸಂಬಂಧಿಕರು ಹಾಗೂ ವಾರಸುದಾರರಿದ್ದಲ್ಲಿ ಹತ್ತಿರದ ಪೊಲೀಸ್ ಠಾಣೆಗೆ ಅಥವಾ ಗಂಗಾವತಿ ಗ್ರಾಮೀಣ ಪೊಲಿಸ್ ಠಾಣೆ ಪಿಐ ದೂ.ಸಂ: 08533-230854, ಮೊ.ಸಂ: 9480803730, ಎಸ್‌ಪಿ ಕಚೇರಿ ದೂ.ಸಂ: 08539-230111 ಗೆ ಸಂಪರ್ಕಿಸಿ ಮಾಹಿತಿ ನೀಡಬೇಕು ಎಂದು ಗಂಗಾವತಿ ಗ್ರಾಮೀಣ ಪೊಲೀಸ್ ಠಾಣೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶಾಲೆಗಳು ಸಾರ್ವಜನಾಂಗದ ಶಾಂತಿಯ ತೋಟ: ಶಾಸ್ತ್ರೀ




**ಜಮಖಂಡಿ :** ಮಕ್ಕಳಿಗೆ ಮನೆಯೇ ಮೊದಲ ಪಾಠ ಶಾಲೆಯಾಗಿದ್ದು, ತಾಯಿ-ತಂದೆ ಮೊದಲ ಗುರುಗಳಾಗಿ ಗುರುತಿಸಿಕೊಂಡಿದ್ದಾರೆ ಎಂದು ಮುಖ್ಯಶಿಕ್ಷಕ ನಾರಾಯಣ ಶಾಸ್ತ್ರೀ ಹೇಳಿದರು.

ತಾಲೂಕಿನ ಕುಂಬಾರಹಳ್ಳ ಸರಕಾರಿ ಪ್ರೌಢ ಶಾಲೆಯಲ್ಲಿ ಎಸ್.ಎಸ್.ಎಲ್.ಸಿ ಮಕ್ಕಳಿಗೆ ಹಮ್ಮಿಕೊಂಡಿದ್ದ ಪಾಲಕರ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಕ್ಕಳಿಗೆ ಎಸ್.ಎಸ್.ಎಲ್.ಸಿ. ಬಹಳ ಮುಖ್ಯವಾದ ಘಟ್ಟವಾಗಿದ್ದು, ತಾಯಂದಿರು ಮತ್ತು ಪಾಲಕರು ಮಕ್ಕಳ ಕಡೆ ಹೆಚ್ಚಿನ ಗಮನಹರಿಸಬೇಕು ಎಂದರು.

ಮಕ್ಕಳಿಗೆ ಆಸ್ತಿ ಮಾಡುವ ಬದಲು ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಬೇಕಾಗಿದೆ, ಟಿ.ವಿ ನೋಡುವುದನ್ನು ಕಡಿಮೆ ಮಾಡುವುದರ ಜೊತೆಗೆ ಮಕ್ಕಳ ಜೊತೆ ಹೆಚ್ಚು ಹೊತ್ತು ಕಳೆಯಬೇಕು. ಕುಂಬಾರಹಳ್ಳ ಗ್ರಾಮದ ಸರ್ವ ಜನಾಂಗದ ದೇವಾಲಯವಾದ ಈ ಶಾಲೆಗೆ ನಿಮ್ಮೆಲ್ಲರ ಸಹಕಾರ ಅತ್ಯಗತ್ಯವಾಗಿದೆ ಎಂದರು.

ಶಿಕ್ಷಕ ಸಂಜೀವ ಝುಂಬುರೆ ಮಾತನಾಡಿ, ರೂಪಣಾತ್ಮಕ ಪರೀಕ್ಷೆಯ ಫಲಿತಾಂಶದ ವಿವರಣೆ ನೀಡಿ ಮಕ್ಕಳು ಹೇಗೆ ಅಭ್ಯಾಸ ಮಾಡಬೇಕು. ಪಾಲಕರು ಹೇಗೆ ವರ್ತನೆ, ಮಕ್ಕಳ ಸಮಸ್ಯೆಗಳಿಗೆ ಪರಿಹಾರ ಏನು ಎನ್ನುವುದರ ಕುರಿತು ಸಂಪೂರ್ಣ ಮಾಹಿತಿ ನೀಡಲು ನಾವೆಲ್ಲರೂ ನಿಮ್ಮ ಜೊತೆಯಾಗಿದ್ದೇವೆ. ಪಾಲಕರು ಸಂಸ್ಕಾರವಂತರಾಗಿ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಬೇಕು ಎಂದರು.

ಶಿಕ್ಷಕ ಸಂಗನಬಸವ ಉಟಗಿ ಮಾತನಾಡಿ, ಸಾಧನೆಗೆ ಅಸಾಧ್ಯವಾದುದು ಯಾವುದೂ ಇಲ್ಲ, ಮನಸ್ಸು ಮಾಡಿದರೆ ಎಲ್ಲರಿಗೂ ಯಶಸ್ಸಿ ಲಭಿಸಲಿದೆ. ನೀವೂ ಸಹ ಸಹಕಾರ ನೀಡಿದರೆ ಉತ್ತಮ ಫಲಿತಾಂಶ ಪಡೆಯಲು ಸಾಧ್ಯ. ಕುಂಬಾರಹಳ್ಳ ಶಾಲೆಗೆ ತನ್ನದೆ ಆದ ವಿಶೇಷತೆಯಿದೆ. ನಾವು ರಜೆ ದಿನಗಳಲ್ಲಿ ಮಕ್ಕಳಿಗೆ ವಿಶೇಷ ತರಗತಿ ಮೂಲಕ ಬೋಧನೆಯಲ್ಲಿ ತೊಡಗಿಕೊಂಡಿದ್ದೇವೆ ಎಂದರು.

ಪಾಲಕರಾದ ಪದ್ಮ ಹುದಲಿ, ಪಿ.ಎಲ್.ಡಿ. ಬ್ಯಾಂಕಿನ ನಿರ್ದೇಶಕ ಬಸವರಾಜ ಮರನೂರ, ಶಿಕ್ಷಕಿ ಸವಿತಾ ಬೆನಕಟ್ಟಿ, ಗ್ರಾ.ಪಂ.ಉಪಾಧ್ಯಕ್ಷ ಧರೆಪ್ಪ ಮಂಟೂರ, ಸದಸ್ಯ ಸದಾನಂದ ಮರನೂರ ಮಾತನಾಡಿದರು.

ನಿವೃತ್ತ ಯೋಧ ಮುತ್ತಪ್ಪ ಮರನೂರ, ಗ್ರಾ.ಪಂ. ಸದಸ್ಯರಾದ ಸಿದ್ದು ಕುರಣಿ, ನಿಂಗಪ್ಪ ತೇರದಾಳ, ರಾಜು ಮಾಳಿ, ಕಮಲವ್ವ ಕುರುಣಿ, ಮಾಜಿ ಅಧ್ಯಕ್ಷರಾದ ಭೀಮಪ್ಪ ಮಾಳಿ, ನಾಗಪ್ಪ ಹೆಗಡೆ, ಶಕುಂತಲಾ ಬಿರಾದಾರ, ಚಂದ್ರಕಾಂತ ಪೋಲೀಸ, ಎ.ಎಂ. ಮೋಮಿನ್ ಸಹಿತ ಹಲವರು ಇದ್ದರು.

# ನೆಮ್ಮದಿಯ ಬದುಕಿಗೆ ಅಧ್ಯಾತ್ಮ ಅವಶ್ಯಕ: ಕಾವ್ಯಶ್ರೀ ಅಮ್ಮನವರು



**ಮಹಾಲಿಂಗಪುರ :** ಮನುಷ್ಯನ ನೆಮ್ಮದಿ ಬದುಕಿಗೆ ಅಧ್ಯಾತ್ಮ ಅವಶ್ಯಕವಾಗಿದೆ ಎಂದು ನಾಗನೂರ ವೀರಭದ್ರೇಶ್ವರ ಮಠದ ಕಾವ್ಯಶ್ರೀ ಅಮ್ಮನವರು ಹೇಳಿದರು.

ಪಟ್ಟಣದ ಟೋಣಪಿನಾಥ ದೇವಸ್ಥಾನದಲ್ಲಿ ಶ್ರಾವಣ ಮಾಸದ ನಿಮಿತ್ಯ ಪಟ್ಟಣದ ಬಣಜಿಗ ಕ್ಷೇಮಾಭಿವೃದ್ಧಿ ಸಂಘದಿಂದ ಹಮ್ಮಿಕೊಂಡಿದ್ದ 10 ದಿನಗಳ ಪ್ರವಚನ ಸಮಾರೋಪದಲ್ಲಿ ಮಾತನಾಡಿದ ಅವರು ಈ ರೀತಿಯ ಧಾರ್ಮಿಕ ಕಾರ್ಯಕ್ರಮಗಳು ಸಮಾಜದ ಜನರು ಸಾಮೂಹಿಕವಾಗಿ ಭಾಗವಹಿಸುವದು, ಆಧ್ಯಾತ್ಮಿಕ ಆಲೋಚನೆ ಮತ್ತು ದೇವಿಯ ಭಕ್ತಿಗೆ ಪ್ರೇರಣೆ ನೀಡಲು ಸತ್ಸಂಗದಲ್ಲಿ ಭಾಗವಹಿಸುವದು ಅತ್ಯಂತ ಮುಖ್ಯವಾಗಿದೆ ಎಂದರು.

ಹತ್ತು ದಿನಗಳ ಕಾಲ ಪ್ರವಚನ, ಮಹಿಳೆಯರಿಗೆ ಉಡಿ ತುಂಬುವದು, ಮಹಾಪ್ರಸಾದ ಸೇರಿದಂತೆ ಹಲವು ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು. ಹತ್ತು ದಿನಗಳ ಕಾಲ ಘತ್ತರಗಿ ಭಾಗ್ಯವಂತಿ ದೇವಿ ಚರಿತ್ರೆಯಾಧರಿಸಿದ ಪ್ರವಚನ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಲು ಸಹಕರಿಸಿದ ಕಾವ್ಯಶ್ರೀ ಅಮ್ಮನವರನ್ನು ಸನ್ಮಾನಿಸಲಾಯಿತು. ಬಣಜಿಗ ಕ್ಷೇಮಾಭಿವೃದ್ಧಿ ಸಂಘದ ಗೌರವಅಧ್ಯಕ್ಷ ಚಂದ್ರು ಗೊಂದಿ, ಅಧ್ಯಕ್ಷ ಮಹಾಲಿಂಗಪ್ಪ ಚ.ಕುಳ್ಳೊಳ್ಳಿ, ಉಪಾಧ್ಯಕ್ಷ ಬಸವರಾಜ ಘಟ್ನಟ್ಟಿ, ಕಾರ್ಯದರ್ಶಿ ಮಾನಿಂಗಪ್ಪ ಅವರಾದಿ, ಯುವಘಟಕದ ಅಧ್ಯಕ್ಷ ಚನ್ನಬಸು ಹೊಸೂರ, ಉಪಾಧ್ಯಕ್ಷ ಸಂಜು ಅಂಗಡಿ, ಕಾರ್ಯದರ್ಶಿ ರಮೇಶ ಹರಕಂಗಿ ಮತ್ತು ಚನ್ನಪ್ಪ ಪಟ್ಟಣಶೆಟ್ಟಿ, ಅಶೋಕ ಅಂಗಡಿ, ಬಸವರಾಜ ಮುಂಗರವಾಡಿ, ಪ್ರಭು ಕುಳ್ಳೊಳ್ಳಿ, ಪ್ರೀತಿ ಸಗರಿ ಮತ್ತು ಸಮಾಜದ ಸರ್ವ ಸದಸ್ಯರ ನೇತೃತ್ವದಲ್ಲಿ ಕಾರ್ಯಕ್ರಮವು ಯಶಸ್ವಿಯಾಗಿ ನೇರವೇರಿತು.

# ವೃತ್ತಿಯ ಘನತೆಗೆ ಪ್ರಾಮಾಣಿಕ ಸೇವೆ ಅಗತ್ಯ: ಡಿ. ಎಂ. ಜತ್ತಿ



**ಜಮಖಂಡಿ :** ವೃತ್ತಿಯ ಘನತೆಗೆ ಪ್ರಮಾಣಿಕ ಸೇವೆ ಅಗತ್ಯ. ನೊಂದ ಕಕ್ಷಿದಾರರಿಗೆ ನ್ಯಾಯ ಕೊಡಿಸುವ ಮೂಲಕ ವಕೀಲರು ಆಶಾಕಿರಣವಾಗಿ ಹೊರಹೊಮ್ಮಬೇಕು. ವಕೀಲ ವೃತ್ತಿ ಬದುಕು ಸೇವಾಮನೋಭಾವನೆ ಹೊಂದಿರಬೇಕು ಎಂದು ನ್ಯಾಯವಾದಿಗಳ ಸಂಘದ ಅಧ್ಯಕ್ಷ ಡಿ.ಎಂ. ಜತ್ತಿ ಹೇಳಿದರು.

ನಗರದ ಬಿ.ಎಲ್.ಡಿ.ಇ. ಸಂಸ್ಥೆಯ ಕಾನೂನು ಮಹಾವಿದ್ಯಾಲಯದಲ್ಲಿ ಸನ್ 2023-24ನೇ ಸಾಲಿನ ಸಾಂಸ್ಕೃತೀಕ, ಕ್ರೀಡೆ ಹಾಗೂ ಎನ್.ಎಸ್.ಎಸ್ ಚಟುವಟಿಕೆಗಳ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ನ್ಯಾಯವಾದಿ ಎಸ್.ಪಿ.ಪಾರಶೆಟ್ಟಿ ಮಾತನಾಡಿ, ವೃತ್ತಿಯಲ್ಲಿ ಯಶಸ್ವಿಯಾಗಲು ನಿರಂತರ ಪರಿಶ್ರಮ ಅಧ್ಯಯನ ಅಗತ್ಯ. ಸಮರ್ಪಣಾ ಮನೋಭಾವದ ಮನಸ್ಥಿತಿಯಿಂದ ವೃತ್ತಿಯಲ್ಲಿ ತೊಡಗಿಸಿಕೊಳ್ಳಬೇಕು ಎಂದರು. ಕಾನೂನು ಕಾಲೇಜಿನ ಪ್ರಾಚಾರ್ಯ ಡಾ.ಆರ್.ಜಿ.ಕುಲಕರ್ಣಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವೇದಿಕೆಯಲ್ಲಿ ಉಪನ್ಯಾಸಕರಾದ ಹಣುಮಂತ ಸಲಗರ, ನಿಖಿಲ ಮಂಟೂರ, ಬಾಬುರಾವ ಕುಲಕರ್ಣಿ, ಸುರೇಶ ಕೋಳಿಗುಡ್ಡ, ಡಾ.ಶ್ರೀದೇವಿ ಸುವರ್ಣಖಂಡಿ, ನ್ಯಾಯವಾದಿ ಕೌಜಲಗಿ ಸಹಿತ ಹಲವರು ಇದ್ದರು.

ಇದೇ ಸಂದರ್ಭದಲ್ಲಿ ಕಾನೂನು ವಿಭಾಗದಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡಿ ಗೌರವಿಸಲಾಯಿತು.

ಗೌರಿ ಜೋಶಿ ಪ್ರಾರ್ಥಿಸಿದರು. ಚಿತ್ರಶ್ರೀ ಕೋಹಳ್ಳಿ ಸ್ವಾಗತಿಸಿದರು. ಐ.ಕ್ಯೂ.ಎ.ಸಿ. ಸಂಯೋಜಕ ಸುಖದೇವ ಗಸ್ತಿ ವರದಿ ವಾಚಿಸಿದರು. ಕರಣ ಮೈತ್ರಿ ನಿರೂಪಿಸಿದರು. ಅಂಜುಮಾ ಕುಡುಚಿ ವಂದಿಸಿದರು.

# ಅಕ್ಕಮಹಾದೇವಿ ಮಹಿಳಾ ವಿವಿಯಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರ



**ವಿಜಯಪುರ :** ಇಲ್ಲಿಯ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ, ಎನ್.ಎಸ್.ಎಸ್ ಕೋಶ, ವಿದ್ಯಾರ್ಥಿಗಳ ಕ್ಷೇಮಪಾಲನಾ ನಿರ್ದೇಶನಾಲಯ, ಆರೋಗ್ಯ ಕೇಂದ್ರ ಮತ್ತು ಜಿಲ್ಲಾ ಆಸ್ಪತ್ರೆ ಇವರ ಸಂಯುಕ್ತ ಆಶ್ರಯದಲ್ಲಿ ಇತ್ತೀಚೆಗೆ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಆಯೋಜಿಸಲಾಗಿತ್ತು.

ಸಮಾಜ ವಿಜ್ಞಾನ ನಿಕಾಯದ ಡೀನ್ ಹಾಗೂ ಮಹಿಳಾ ವಿವಿಯ ವಿದ್ಯಾರ್ಥಿಗಳ ಕ್ಷೇಮಪಾಲನಾ ನಿರ್ದೇಶನಾಲಯದ ನಿರ್ದೇಶಕಿ ಪ್ರೊ. ಶಾಂತಾದೇವಿ ಸಸಿಗೆ ನೀರುಣಿಸುವ ಮೂಲಕ ಉದ್ಘಾಟಿಸಿದರು.

ಪ್ರಸ್ತುತ ಬದಲಾಗುತ್ತಿರುವ ವಾತಾವರಣದಲ್ಲಿ ಉತ್ತಮ ಆರೋಗ್ಯ ಕಾಪಾಡಿಕೊಳ್ಳವುದು ಅತ್ಯಗತ್ಯವಾಗಿದೆ ಎಂದು ಎನ್.ಎಸ್.ಎಸ್ ಕಾರ್ಯಕ್ರಮ ಸಂಯೋಜನಾಧಿಕಾರಿ ಪ್ರೊ, ಅಶೋಕಕುಮಾರ ಸುರಪುರ ಹೇಳಿದರು.

ಇದೇ ಸಂದರ್ಭದಲ್ಲಿ ಎಲ್ಲ ಗಣ್ಯರು ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ವಿವಿಯ ವಿದ್ಯಾರ್ಥಿನಿಯರು, ಸಂಶೋಧನಾ ವಿದ್ಯಾರ್ಥಿನಿಯರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಈ ಶಿಬಿರದ ಪ್ರಯೋಜನೆಯನ್ನು ಪಡೆದುಕೊಂಡರು. ಶಿಬಿರದಲ್ಲಿ ಬಿಪಿ, ಶುಗರ್, ರಕ್ತ ತಪಾಸಣೆ ಸಹ ಮಾಡಲಾಯಿತು. ಶಿಬಿರದಲ್ಲಿ ಜಿಲ್ಲಾ ಆಸ್ಪತ್ರೆಯ ಹಿರಿಯ ವೈದ್ಯಾಧಿಕಾರಿ ಡಾ. ನಿರಂಜನ, ಟಿ, ಶಿಕ್ಷಣ ನಿಕಾಯದ ಡೀನ್ ಪ್ರೊ. ಸಕ್ಪಾಲ ಹೂವಣ್ಣ ಮತ್ತಿತರರು ಉಪಸ್ಥಿತರಿದ್ದರು.

# ಕ್ಲಸ್ಟರ್ ಮಟ್ಟದ ಕ್ರೀಡಾಕೂಟದಲ್ಲಿ ಸಪ್ತಸಾಗರದ ಶಾರದಾ ಪ್ರಾಥಮಿಕ ಶಾಲೆಯ ಸಾಧನೆ

**ಅಥಣಿ :** ತಾಲೂಕಿನ ದರೂರ ಗ್ರಾಮದಲ್ಲಿ ಕ್ಲಸ್ಟರ್ ಮಟ್ಟದ ಪ್ರಾಥಮಿಕ ವಿಭಾಗದ ಕ್ರೀಡಾಕೂಟ ಹಾಗೂ ಪ್ರೌಢಶಾಲಾ ವಿಭಾಗದಿಂದ ಅಥಣಿ ತಾಲೂಕಾ ಮಟ್ಟದ ಚೆಸ್ ಸ್ಪರ್ಧೆಗಳನ್ನು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಿಂದ ಆಯೋಜಿಸಿದ ಕ್ರೀಡೆಗಳು ದರೂರ ಶಾಲೆಯಲ್ಲಿ ಜರುಗಿದವು.

ತಾಲೂಕಿನ ಸಪ್ತಸಾಗರ ಗ್ರಾಮದ ಶಾರದಾ ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಯ, ಶಾರದಾ ಕನ್ನಡ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆಯ ವಿದ್ಯಾರ್ಥಿ/ನಿಯರು ಭಾಗವಹಿಸಿದ್ದರು.

ಪ್ರಾಥಮಿಕ ವಿಭಾಗದ ಗಂಡು ಮಕ್ಕಳ ಕಬಡ್ಡಿ ಗುಂಪು ಆಟದಲ್ಲಿ ಪ್ರಥಮ ಸ್ಥಾನ ಹಾಗೂ ಹೆಣ್ಣು ಮಕ್ಕಳ ಥ್ರೋಬಾಲ್ ಗುಂಪು ಆಟದಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ

ಸೇವಂತಿ ಸದಾಶಿವ ಬಡಿಗೇರ ಬಾಲಕಿಯರ ಗುಂಡು ಎಸೆತದಲ್ಲಿ ಪ್ರಥಮ ಹಾಗೂ ಚಕ್ರ ಎಸೆತದಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾಳೆ.

ಗಂಡು ಮಕ್ಕಳ ಚಕ್ರ ಎಸೆತದಲ್ಲಿ ಫಯಾಜ ಪೈಗಂಬರ ಚಿಣಗಿ ಪ್ರಥಮ ಸ್ಥಾನ ಹಾಗೂ 200 ಮೀಟರ್ ಓಟದಲ್ಲಿ ದ್ವಿತೀಯ

ಸ್ಥಾನ ಪಡೆದಿದ್ದಾನೆ.

ಗಂಡು ಮಕ್ಕಳ ಚಕ್ರ ಎಸೆತದಲ್ಲಿ ಮೈಬೂಬ ಇಬ್ರಾಹಿಂ ಹುಕ್ಕೇರಿ ದ್ವಿತೀಯ ಸ್ಥಾನ ಪಡೆದಿದ್ದಾನೆ. ಹಾಗೂ ಪ್ರೌಢಶಾಲಾ ವಿಭಾಗದಿಂದ ಅಥಣಿ ತಾಲೂಕಾ ಮಟ್ಟದ ಚೆಸ್ ಸ್ಪರ್ಧೆಯಲ್ಲಿ ವರ್ಷಿತಾ ಭರಮಗೌಡ ಪಾಟೀಲ ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾಳೆ

ಶಾರದಾ ಕನ್ನಡ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯ ಸುರೇಶ ಸವದಿಯವರ ನೇತೃತ್ವದಲ್ಲಿ, ದೈಹಿಕ ಶಿಕ್ಷಣ ಶಿಕ್ಷಕ ಪ್ರಶಾಂತ ಹಳ್ಳೂರ ಮಕ್ಕಳಿಗೆ ಅತ್ಯುತ್ತಮ ತರಬೇತಿ ನೀಡಿದ್ದರು. ಮಹ್ಮದ ನದಾಫ ಶಿಕ್ಷಕರು ಗಂಡು ಮಕ್ಕಳ ತಂಡದ ವ್ಯವಸ್ಥಾಪಕರಾಗಿದ್ದರು. ಶಿಕ್ಷಕಿ ಕುಮಾರಿ ರಾಜಶ್ರೀ ಲಾಳಿ ಇವರು ಹೆಣ್ಣು ಮಕ್ಕಳ ತಂಡದ ವ್ಯವಸ್ಥಾಪಕಿಯರಾಗಿದ್ದರು.

ವಿಜೇತರಿಗೆ ಹಾಗೂ ಭಾಗವಹಿಸಿದ ಎಲ್ಲಾ ಕ್ರೀಡಾಪಟುಗಳಿಗೆ,

ಸಮಸ್ತ ಪಾಲಕ ಬಂಧುಗಳು, ಶಾರದಾ ಹಿರಿಯ ವಿದ್ಯಾರ್ಥಿ/ನಿಯರು, ಗ್ರಾಮದ ಎಲ್ಲಾ ನಾಗರಿಕರು, ಶಿಕ್ಷಕ/ಶಿಕ್ಷಕಿಯರ ವೃಂದ ಹಾಗೂ ಪ್ರಾಥಮಿಕ ವಿಭಾಗದ ಮುಖ್ಯೋಪಾಧ್ಯಾಯ ಮುಕುಂದ ತೀರ್ಥ ಹಾಗೂ ಸಂಸ್ಥೆಯ ಆಡಳಿತ ಮಂಡಳಿ ಪರವಾಗಿ ಸಂಸ್ಥೆಯ ಸಂಸ್ಥಾಪಕ ಡಿ.ಬಿ ನದಾಫ ರವರು ಹೃತ್ಪೂರ್ವಕ ಅಭಿನಂದನೆಗಳನ್ನು ತಿಳಿಸಿದ್ದಾರೆ.

# ಮಕ್ಕಳಿಗೆ ಶಿಕ್ಷಣದ ಜೊತೆ ಒಳ್ಳೆಯ ಸಂಸ್ಕಾರ ಮತ್ತು ಸಂಸ್ಕೃತಿಯನ್ನು ಕಲಿಸಿ: ಶಿವಶಂಕರ ಹಂಜಿ



**ಅಥಣಿ :** ಇಲ್ಲಿಯ ಅಥಣಿ ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಯ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆಯಲ್ಲಿ ಶನಿವಾರ ಶ್ರಿ ಕೃಷ್ಣ ಜನ್ಮಾಷ್ಟಮಿ ನಿಮಿತ್ತ ಎಲ್ ಕೆಜಿ, ಯುಕೆಜಿ ಮಕ್ಕಳಿಗೆ ರಾಧಾ ಕೃಷ್ಣ ವೇಷಭೂಷಣ ಸ್ಪರ್ಧೆ ಏರ್ಪಡಿಸಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ನೂತನ ಅಧ್ಯಕ್ಷ ಶಿವಶಂಕರ ಹಂಜಿ ಮಾತನಾಡಿ ಮಕ್ಕಳ ಮನಸ್ಸು ಹೂವಿನ ಹಾಗ ಇರುತ್ತದೆ, ಹಾಗೂ ಚಿಕ್ಕ ಮಕ್ಕಳಿಗೆ ಯಾವುದೇ ವೇಷಭೂಷಣ ತೊಡಸಿದರೂ ಅಂದ ಚೆಂದವಾಗಿ ಕಾಣುತ್ತಾರೆ. ಹಿಂದಿನ ಇತಿಹಾಸ ತಿಳಿಸುವ ಪಾತ್ರಗಳು ಮಕ್ಕಳಿಗೆ ಅರಿವು ಮೂಡಿಸಲು ಇಂತಹ ಸ್ಪರ್ಧೆಗಳು ಸಹಕಾರಿ, ಚಿಕ್ಕ ಮಗು ಇರುವಾಗಲೇ ಮಕ್ಕಳಲ್ಲಿ ಉತ್ತಮ ಸಂಸ್ಕೃತಿ ಮತ್ತು ಸಂಸ್ಕಾರವನ್ನು ಕಲಿಸಬೇಕು. ಶ್ರೀಕೃಷ್ಣನ ಆದರ್ಶವನ್ನು ಮಕ್ಕಳಿಗೆ ತಿಳಿಸುವದು ಇಂದಿನ ಅಗತ್ಯವಾಗಿದೆ. ಇಂದಿನ ಮಕ್ಕಳಲ್ಲಿ ನೈತಿಕತೆ ಕಾಣೆಯಾಗುತ್ತಿದೆ. ಹೀಗಾಗಿ ಪಾಲಕರು ಮಕ್ಕಳಿಗೆ ಉತ್ತಮ ದಾರಿ ತೋರುವಂತಾಗಬೇಕು, ಪರಸ್ಪರ ವಿಶ್ವಾಸ ಪ್ರಿತಿಯಿಂದ ಇರುವಂತೆ ನೋಡಿಕೊಳ್ಳಬೇಕು. ಚಿಕ್ಕ ಮಕ್ಕಳ ಕೈಯಲ್ಲಿ ಪಾಲಕರು ಎಂದಿಗೂ ಮೊಬೆಲ್ ಕೊಡಬಾರದು, ಈ ಮೊಬೈಲ್ ಚಟಕ್ಕೆ ಅಂಟಿಕೊಂಡ ಮಕ್ಕಳಿಗೆ ಓದು ಬರಹದ ಕಡೆಗೆ ಒಲವು ಕಡಿಮೆಯಾಗುತ್ತದೆ. ಆದ್ದರಿಂದ ಪಾಲಕರು ಎಚ್ಚರಿಕೆ ವಹಿಸಬೇಕೆಂದು ಕರೆ ನೀಡಿದರು.

ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷ ಪ್ರಕಾಶ ಮಹಾಜನ ಮಾತನಾಡಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಆಡಳಿತ ಮಂಡಳಿಯ ನಿರ್ದೇಶಕರಾದ ವಿಜಯಕುಮಾರ ಬುರ್ಲಿ, ಅಶೋಕ ಜಿ. ಬುರ್ಲಿ , ಶ್ರೀಶೈಲ ಜಿ. ಸಂಕ, ಸುನೀಲ ಐ. ಶಿವಣಗಿ, ಓಂಕಾರೆಪ್ಪಾ ಸಾವಡಕರ ಹಾಗೂ ಸಂಸ್ಥೆಯ ಎಲ್ಲ ಶಿಕ್ಷಕ ವೃಂದ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಆಡಳಿತ ಅಧಿಕಾರಿ ಎಚ್ ಆರ್ ಗುಡೋಡಗಿ ಸ್ವಾಗತಿಸಿದರು. ಎಸ್ ಪಿ ಪೀರಗೊಂಡ ನಿರೂಪಿಸಿದರು. ಪಿ ಡಿ ಚನಗೌಡರ ವಂದಿಸಿದರು.

# ಕಾರ್ಮಿಕ ಹಿತರಕ್ಷಣಾ ಸಂಘಟನೆ ಸಂಸ್ಥಾಪಣಾ ದಿನಾಚರಣೆ



**ಚನ್ನಮ್ಮನ ಕಿತ್ತೂರು :** ಕಾರ್ಖಾನೆ ವಿಷಯದಲ್ಲಿ ಕಾರ್ಮಿಕರು ಮತ್ತು ಆಡಳಿತ ಮಂಡಳಿ ಒಗ್ಗಟಿನಿಂದ ಕಾರ್ಯನಿರ್ವಹಿಸಿದರೆ ಯಾವೊಂದು ಕಾರ್ಯನಿಲ್ಲುವುದಿಲ್ಲ. ಎಂದು ಕೆಪಿಸಿಸಿ ಸದಸ್ಯೆ ರೋಹಿನಿ ಪಾಟೀಲ ಹೇಳಿದರು.

ತಾಲೂಕಿನ ಶ್ರೀ ಮಲಪ್ರಭಾ ಸಹಕಾರಿ ಸಕ್ಕರೆ ಆವರಣದಲ್ಲಿ ಕಾರ್ಮಿಕ ಹಿತರಕ್ಷಣಾ ಸಂಘಟನೆ 3ನೇ ಸಂಸ್ಥಾಪನಾ ದಿನಾಚರಣೆ ಮತ್ತು ಸತ್ಕಾರ ಸಮಾರಂಭದ ಕಾರ್ಯಕ್ರಮದಲ್ಲಿ ದೀಪಬೆಳಗಿಸಿ, ಸತ್ಕಾರ ಸ್ವೀಕರಿಸಿ ಕಾರ್ಮಿಕರಿಗೆ ಸಿಹಿ ತಿನ್ನಿಸಿ ಅವರು ಮಾತನಾಡಿದ ಕಾರ್ಖಾನೆ ವಿಷಯ ಬಂದಾಗ ಕಾರ್ಮಿಕರೆಲ್ಲರೂ ಒಗ್ಗಟಿನಿಂದ ಇರಬೇಕು. ಮತ್ತು ಸಂಸ್ಥೆಯ ಅಭಿವೃದ್ಧಿ ಕಾರ್ಖಾನೆ ಏಳ್ಗೆಯ ಗುರಿ ಇಟ್ಟುಕೊಂಡು ಕೆಲಸ ಮಾಡಿ ಕಾರ್ಖಾನೆ ಬೆಳೆಸಬೇಕು. ರಾಜ್ಯದಲ್ಲಿ ಕಾಂಗ್ರೇಸ್ ಸರ್ಕಾರವಿದ್ದು ಕ್ಷೇತ್ರದ ಶಾಸಕ ಬಾಬಾಸಾಹೇಬ ಪಾಟೀಲ ಹಾಗೂ ಸಕ್ಕರೆ ಸಚಿವ ಮುಖ್ಯಮಂತ್ರಿಯವರಿಂದ ಕಾರ್ಖಾನೆಗೆ ಬೇಕಾಗುವ ಎಲ್ಲ ಸೌಲಭ್ಯ ಒದಗಿಸಲು ಪ್ರಯತ್ನಿಸುತ್ತೇನೆ. ರೈತರಿಗೆ ಉತ್ತಮ ಬೆಂಬಲ ಬೆಲೆ ನೀಡೋಣ ಮತ್ತು ರೈತ ಬಾಂದವರು ಬೇರೆ ಕಾರ್ಖಾನೆ ಕಬ್ಬು ಪೂರೈಸದೇ ಇದೇ ಕಾರ್ಖಾನೆಗೆ ಕಬ್ಬು ಪೂರೈಸಿದರೇ ಇನ್ನೂ ಹೆಚ್ಚಿ ಅಭಿವೃದ್ಧಿ ಹೊಂದಲು ಸಾಧ್ಯವೆಂದರು.

ಅತಿಥಿಗಳಾಗಿ ಸತ್ಕಾರ ಸ್ವೀಕರಿಸಿ ಮಾತನಾಡಿದ ಕಾರ್ಖಾನೆ ನಿರ್ದೇಶಕ ಸಿದ್ದಪ್ಪ ದೂರಪ್ಪನವರ ಕಳೆದ ಮೂರು ವರ್ಷಗಳಿಂದ ಕಾರ್ಮಿಕ ಹಿತರಕ್ಷಾ ಸಂಘಟಣೆ ದಿನಾಚರಣೆ ಆಚರಿಸುತ್ತಾ ಬಂದಿದ್ದು ಕಾರ್ಖಾನೆ ಅಭಿವೃದ್ದಿಗೊಸ್ಕರ ಕಾರ್ಮಿಕರೆಲ್ಲರೂ ಶ್ರಮವಹಿ ದುಡಿಯುತಿದ್ದಾ್ತರೆ, ಕಾರ್ಖಾನೆ ಏಳ್ಗೆ ಇವರ ಜವಾಬ್ದಾರಿಯಾಗಿದ್ದು. ಇವರ ಜೊತೆಗೆ ಆಡಳಿತ ಮಂಡಳಿ ಕೈಜೋಡಿಸಿದರೆ ಕಾರ್ಖಾನೆ ಇನ್ನೂ ಹೆಚ್ಚಿಗೆ ಅಭಿವೃದ್ಧಿ ಹೊಂದುತ್ತದೆ ಎಂದರು.

ಮುಖ್ಯ ಅತಿಥಿಯಾಗಿ ಕಾರ್ಖಾನೆ, ನಿಕಟಪೂರ್ವ ಅಧ್ಯಕ್ಷ

ಹಾಗೂ ನಿರ್ದೇಶಕ ನಾಶೀರ ಬಾಗವಾನ್ ಮಾತನಾಡಿ . ನಾನು ಅಧ್ಯಕ್ಷನಾದ ಸಂದರ್ಭದಲ್ಲಿ ಕಾರ್ಮಿಕರ ಹಿತ ಕಾಪಾಡುವಲ್ಲಿ ಆಡಳಿತ ಮಂಡಳಿ ಒಗ್ಗೂಡಿಸಿಕೊಂಡು ಕೆಲಸ ಮಾಡಿದ್ದೇನೆ. ರೈತರಿಗೆ, ಕಾರ್ಖಾನೆಗೆ, ಕಾರ್ಮಿಕರಿಗೆ ಯಾವ ಅನ್ಯಾಯ ಮಾಡಿಲ್ಲ ಎಂದರು.

ರಸ್ತಾವಿಕವಾಗಿ ವ್ಯವಸ್ಥಾಪಕ ನಿರ್ದೇಶಕ ಮೋಹನ ಹಿರೇಮಠ, ನಿದೇರ್ಏಶಕರುಗಳಾದ ಅಶೋಕ ಬೆಂಡಿಗೇರಿ, ಮೀನಾಕ್ಷಿ ನೆಲಗಳಿ, ಕಾರ್ಮಿಕ ಸಂಘಟನೆ ಅಧ್ಯಕ್ಷ ರಾಜೇಂದ್ರ ಶಿರಮೋಜಿ ಮಾತನಾಡಿದರು.

ಕಾರ್ಮಿಕ ಸಂಘಟನೆಯವರಿಂದ ವ್ಯವಸ್ಥಾಪಕ ನಿರ್ದೇಶಕ ಹಾಗೂ ಕಾರ್ಖಾನೆ ನಿರ್ದೇಶಕರನ್ನು ಸತ್ಕರಿಸಿ ಗೌರವಿಸಲಾಯಿತು. ಇದೇ ವೇಳೆ ಕಾರ್ಮಿಕರಿಗೆ ಪ್ರತಿಜ್ಞಾ ವಿಧಿಯನ್ನು ಬೋಧಿಸಲಾಯಿತು, 230 ಮುಕ್ತೆ ಕಾರ್ಮಿಕರನ್ನು ಹಂಗಾಮಿ ಕಾರ್ಮಿಕರೆಂದು ನೇಮಕಗೊಳಿಸಿ ಆದೇಶ ಪತ್ರ ನೀಡಲಾಯಿತು. ಕಲ್ಮೇಶ್ವರ ಪ್ರೌಢ ಶಾಲಾ ಮಕ್ಕಳಿಂದ ಸ್ವಾಗತ ಗೀತೆ ಏರ್ಪಟ್ಟಿರು.

ಅನುಷ್ಯಾ ಮತ್ತು ತನುಷ್ಯಾ ಶಿರಮೋಜಿ ಯವರಿಂದ ಭರತ ನಾಟ್ಯದೊಣಂದಿಗೆ ಕಾರ್ಯಕ್ರಮ ನಡೆಯಿತು. ಇದಕ್ಕೂ ಮೊದಲು ಕಾರ್ಖಾನೆ ಆವರಣದಲ್ಲಿ ವಾದ್ಯಮೇಳ ಮಹಿಳೆಯರಿಂದ ಕುಂಭ ಆರತಿಯೊಂದಿಗೆ ಆಗಮಿಸಿ ಶ್ರೀ ಗಜಾನನ ಮನೂರ್ತಿಗೆ ಅಭಿಷೇಕ ನೇರವೇರಿಸಿ , ಬಂಡೇಮ್ಮ ದೇವಿಗೆ ಉಡಿ ತುಂಬಲಾಯಿತು.

ಈ ವೇಳೆ ನಿರ್ದೇಶಕರುಗಳಾದ ಲಕ್ಷ್ಮಣ ಎಮ್ಮಿ, ಶಂಕರಗೌಡ ಪಾಟೀಲ, ಮಂಜುನಾಥ ಪಟೀಲ, ಬಸವರಾಜ ಪುಂಡಿ, ಜ್ಯೋತಿಬಾ ಹೈಬತ್ತಿ, ಭರತೇಶ ಸೇಭನ್ನವರ, ಬಸವರಾಜ ಬೆಂಡಿಗೇರಿ, ಸಾವಂತ ಕಿರಬನವರ,

ಸಂಜು ಹೊಬಳೇಪ್ಪನವರ, ಅಥಣಿ ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ ಕಾರ್ಮಿಕ ಸಂಘಟನೆ ಅಧ್ಯಕ್ಷ ಹಾಗೂ ಬೈಲಹೊಂಗಲ ಸೋಮೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆ ಅಧ್ಯಕ್ಷ ಸೇರಿದಂತೆ ಕಛೇರಿಯ ಅಧೀಕ್ಷಕ ಶ್ರೀ ಹೆಗಡೆ, ಆಡಳಿತ ಮಂಡಳಿ ಸದಸ್ಯರು, ಕಾರ್ಮಿಕರು, ರೈತರು, ಕಛೇರಿ ಸಿಬ್ಬಂದಿ, ಸಾರ್ವಜನಿಕರಿದ್ದರು. ಕಾರ್ಮಿಕ ಸಂಘದ ಉಪಾಧ್ಯಕ್ಷ ನನಾರಾಯಣ ಜೋಶಿ ಸ್ವಾಗತಿಸಿದರು.

ಸುರೇಶ ಗಣಾಚಾರಿ ನಿರೂಪಿಸಿದರು, ಈಶ್ವರ ವಂದಿಸಿದರು.

# ಕಾಂಗ್ರೆಸ್ ಸರ್ಕಾರ ಅಸ್ಥಿರಗೊಳಿಸಲು ಯತ್ನ: ಸಿಎಂ



**ಹುಬ್ಬಳ್ಳಿ :** ಮುಡಾ ಹಗರಣದಲ್ಲಿ ತಾವು ತಪ್ಪೇ ಮಾಡಿಲ್ಲ. ಆದರೂ ಬಿಜೆಪಿ-ಜೆಡಿಎಸ್ ತಮ್ಮನ್ನು ಟಾರ್ಗೆಟ್ ಮಾಡಿದ್ದು, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವನ್ನು ಅಸ್ಥಿರಗೊಳಿಸುವ ಯತ್ನದಲ್ಲಿ ತೊಡಗಿವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಗಂಭೀರವಾಗಿ ಆರೋಪಿಸಿದರು.

ಹಾವೇರಿಗೆ ತೆರಳುವ ಮುನ್ನ ನಗರದ ವಿಮಾನ ನಿಲ್ದಾಣದಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕುಮಾರಸ್ವಾಮಿ ವಿರುದ್ಧ ತನಿಖೆ ನಡೆದು ಚಾರ್ಜ್‌ಶೀಟ್ ಸಲ್ಲಿಕೆಯಾದರೂ ಪ್ರಾಸಿಕ್ಯೂಶನ್‌ಗೆ ಅನುಮತಿ ಕೊಟ್ಟಿಲ್ಲ. ಹೀಗಾಗಿ ನಾಳೆ ರಾಜ್ಯಪಾಲರನ್ನು ಭೇಟಿ ಮಾಡಲಿರುವ ನಮ್ಮ ಶಾಸಕರು, ಸಂಸದರು, ಎಂ.ಎಲ್.ಸಿ ಗಳು, ಕುಮಾರಸ್ವಾಮಿ, ನಿರಾಣಿ, ಜನಾರ್ಧನ ರೆಡ್ಡಿ ವಿರುದ್ಧ ಪ್ರಾಸಿಕ್ಯೂಶನ್‌ಗೆ ಒತ್ತಾಯ ಮಾಡಲಿದ್ದಾರೆ ಎಂದು ತಿಳಿಸಿದರು.

ವಿಜಯೇಂದ್ರ ಕೇಳಿದೊಡನೆ ನಾನು ರಾಜೀನಾಮೆ ಕೊಡಬೇಕೇ? ಎಂದು ಪ್ರಶ್ನಿಸಿದ ಅವರು, ವಿಜಯೇಂದ್ರ ಬಿಜೆಪಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ನಾನು ಹೇಳಿದರೆ ಅವರು ಕೊಡುತ್ತಾರಾ? ಎಂದು ತಿರುಗೇಟು ನೀಡಿದರು.

ಮುಡಾ ಹಗರಣದ ಕುರಿತು ನಾಳೆ ವಿಚಾರಣೆ ಇದೆ.

ಅದು ಮುಗಿಯಲಿ ನೋಡೋಣ ಎಂದ ಅವರು, ಸದ್ಯ ರಾಷ್ಟ್ರಪತಿಗಳನ್ನು ಭೇಟಿಯಾಗುವ ವಿಚಾರವಿಲ್ಲ ಎಂದು ತಿಳಿಸಿದರು.

ಬಿಜೆಪಿಯವರು ಎಂದೂ ಸ್ವಂತ ಬಲದ ಮೇಲೆ ಅಧಿಕಾರಕ್ಕೆ ಬಂದಿಲ್ಲ. ಆಪರೇಷನ್ ಕಮಲದ ಮೂಲಕವೇ ಅಧಿಕಾರಕ್ಕೆ ಬಂದಿದ್ದಾರೆ. ಮತ್ತೆ ಅದನ್ನು ಮಾಡುವ ಯತ್ನಗಳನ್ನು ನಡೆಸಿದ್ದಾರೆ. ಶಾಸಕರಿಗೆ ನೂರು ಕೋಟಿ ರೂ. ಆಫರ್ ಮಾಡಿರುವ ಕುರಿತು ರವಿ ಗಣಿಗ ನನ್ನ ಮುಂದೆ ಸಹ ಹೇಳಿದ್ದಾರೆ ಎಂದು ಸಿದ್ದರಾಮಯ್ಯ ಹೇಳಿದರು.

ನಟ ದರ್ಶನ್‌ಗೆ ಜೈಲಿನಲ್ಲಿ ರಾಜಾತಿಥ್ಯ ವಿಚಾರ ಕುರಿತಂತೆ ಪ್ರತಿಕ್ರಿಯಿಸುತ್ತ, ವಿಷಯ ತಿಳಿದ ತಕ್ಷಣ 9 ಜನರನ್ನು ಅಮಾನತು ಮಾಡಿದ್ದೇವೆ. ದರ್ಶನ್ ಸೇರಿ ಕೆಲವರನ್ನು ಬೇರೆ ಬೇರೆ ಜೈಲಿಗೆ ಸ್ಥಳಾಂತರ ಮಾಡಿದ್ದೇವೆ. ಡಿಜಿಗೂ ನೋಟೀಸ್ ಕೊಟ್ಟಿದ್ದೇವೆ ಎಂದು ಅವರು ಹೇಳಿದರು.

# ಸರಳ, ಸಜ್ಜನಿಕೆಗೆ ಹೆಸರಾಗಿದ್ದ ಡಾ. ಸಜನಾ



**ರಬಕವಿ-ಬನಹಟ್ಟಿ :** ಜೀವನದ ಮೌಲ್ಯಗಳನ್ನು ಬದುಕಿ ತೋರಿದ ವೈದ್ಯವಿಜ್ಞಾನಿ ಲಿಂಗೈಕ್ಯ ಡಾ. ಸ. ಜ. ನಾಗಲೋಟಿಮಠ ಅವರು ಸರಳ, ಸಜ್ಜನಿಕೆಗೆ ಹೆಸರಾಗಿದ್ದರು.ಅತ್ಯುತ್ತಮವೈದ್ಯಸಾಹಿತಿಯಾಗಿಯೂ ಅಗ್ರಮಾನ್ಯ ರೆನಿಸಿಕೊಂಡಿದ್ದರು. ಕನ್ನಡ ಸಾಹಿತ್ಯ ಲೋಕದಲ್ಲಿ ಅವರದು ಶಾಶ್ವತ ಸ್ಥಾನ. ಅವರ ನಿರಾಡಂಬರ ಜೀವನ ನಮಗೆಲ್ಲಾ ಪ್ರೇರಣೆಯಾಗಿದೆ ಎಂದು ಹಿರಿಯ ಸಾಹಿತಿ ಬನಹಟ್ಟಿಯ ಜಯವಂತ ಕಾಡದೇವರ ಬಣ್ಣಿಸಿದರು.

ರಾಮಪುರದ ಶ್ರೀ ಮಹಾದೇವಪ್ಪ ಪರಪ್ಪ ಬಿಳ್ಳೂರ ಸರಕಾರಿ ಪ್ರೌಢಶಾಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ಜಿಲ್ಲಾ ಘಟಕ ಬಾಗಲಕೋಟೆ, ತಾಲೂಕಾ ಘಟಕ ರಬಕವಿ-ಬನಹಟ್ಟಿ, ವಲಯ ಘಟಕ ತೇರದಾಳ, ಮಹಾಲಿಂಗಪುರ ಅವರ ಆಶ್ರಯದಲ್ಲಿ ವೈದ್ಯ ಸದಾಶಿವ ಲಿಂಗೈಕ್ಯ ಡಾ. ಸ. ಜ. ನಾಗಲೋಟಿಮಠ ಸ್ಮರಣಾರ್ಥ ಹಮ್ಮಿಕೊಂಡಿದ್ದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಡಾ. ಸ. ಜ. ನಾಗಲೋಟಿಮಠ ಅವರ ಜೀವನ ಸಾಧನೆ ಕುರಿತು ಮಾತನಾಡಿ, ಶಾಲಾ ಮಕ್ಕಳು ಸಾಧಕರ ಜೀವನವನ್ನು ಅರಿಯಬೇಕು. ಸಾಧನೆಯತ್ತ ಸಾಗಿ, ಅತ್ಯುನ್ನತ ಸಾಧನೆ ಮಾಡಬೇಕು ಎಂದರು.

ಭೂದಾನಿ ಪರಪ್ಪ ಬಿಳ್ಳೂರ ಅಧ್ಯಕ್ಷತೆಯಲ್ಲಿ ಶಾಲಾ ಮುಖ್ಯೋಪಾಧ್ಯಾಯರಾದ ಮಹೇಶ ಘಾಟಗೆ ಸಸಿಗೆ ನೀರೆರೆದು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸಾಧನೆಗೆ ಅಸಾಧ್ಯವಾದುದು ಯಾವುದೂ ಇಲ್ಲ. ಸಾಧಿಸುವ ಛಲವಿರಬೇಕು. ಮಕ್ಕಳು ಸಾಧನೆಯತ್ತ ಸಾಗಲು ಸತತ ಪರಿಶ್ರಮ, ಮಾನಸಿಕ ಸ್ಥಿರತೆ, ಮನೋಸ್ಥೈರ್ಯ, ಧೈರ್ಯ ಬೇಕು ಎಂದರು.

ತಾಲೂಕಾ ಕಸಾಪ ಅಧ್ಯಕ್ಷ ಮ. ಕೃ. ಮೇಗಾಡಿಯವರು ಮಾತನಾಡಿ ಕಷ್ಟದ ಜೀವನ ಸವೆಸಿ ಸಾಧನೆ ತೋರಿದ ಡಾ. ಸ. ಜ. ನಾಗಲೋಟಿಮಠ ಅವರ ಆದರ್ಶ ಬದುಕು ಮಕ್ಕಳಿಗೆ ಪ್ರೇರಣಾದಾಯಕವಾದುದು. ನಮ್ಮ ರಬಕವಿ-ಬನಹಟ್ಟಿ ಕಸಾಪ ತಾಲೂಕಿನಾದ್ಯಂತ ದತ್ತಿನಿಧಿ ಉಪನ್ಯಾಸ, ಗೀತ ಗಾಯನ ಶಿಬಿರ, ಪುಸ್ತಕಾವಲೋಕನ, ಶಾಲೆಗಳೆಡೆಗೆ ಸಾಹಿತ್ಯದ ನಡಿಗೆ, ಸದಸ್ಯತ್ವ ಅಭಿಯಾನ ಸೇರಿದಂತೆ ನಿರಂತರ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದರು. ಈ ಸಂದರ್ಭದಲ್ಲಿ

ಹಿರಿಯರಾದ ಬಸವಪ್ರಭು ಹಟ್ಟಿ, ತೇರದಾಳ ವಲಯ ಕಸಾಪ ಅಧ್ಯಕ್ಷ ಗಂಗಾಧರ ಮೋಪಗಾರ, ಈರಣ್ಣ ಗಣಮುಖಿ, ಅಪ್ಪಾಸಾಬ ತುಬಚಿ, ಎನ್. ಜಿ. ಅರಳಿಕಟ್ಟಿ ಪಾಲ್ಗೊಂಡಿದ್ದರು. ಕಸಾಪ ಗೌರವ ಕಾರ್ಯದರ್ಶಿ ಶ್ರೀಶೈಲ ಬುರ್ಲಿ ಮಾತನಾಡಿದರು. ಶಾಲಾ ಮಕ್ಕಳು ಪ್ರಾರ್ಥಿಸಿದರು. ಎ. ಎ. ಮೋಮಿನ್ ಸ್ವಾಗತಿಸಿದರು. ನಜೀರ್‌ಅಹ್ಮದ್ ಆರ್. ನಿರೂಪಿಸಿದರು. ಶಿಕ್ಷಕಿ ಗೀತಾ ಫಕೀರಪುರ ವಂದಿಸಿದರು.

# ಶಾಂತಿ ಸೌಹಾರ್ದತೆಯಿಂದ ಹಬ್ಬ ಆಚರಣೆಗೆ ಕರೆ



**ಬ್ಯಾಡಗಿ :** ಪ್ರತಿ ವರ್ಷದಂತೆ ಈ ವರ್ಷವೂ ಕಾನೂನು ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಶಾಂತಿ ಸೌಹಾರ್ದತೆಯಿಂದ ಗೌರಿಗಣೇಶ ಹಬ್ಬವನ್ನು ಆಚರಣೆ ಮಾಡಬೇಕೆಂದು ಸಿಪಿಐ ಮಾಹಂತೇಶ ಲಂಬಿ ಹೇಳಿದರು.

ಪಟ್ಟಣದ ಶ್ರೀ ಸಿದ್ದೇಶ್ವರ ಸಭಾಭವನದಲ್ಲಿ ಬ್ಯಾಡಗಿ ಪಟ್ಟಣ ಹಾಗೂ ತಾಲೂಕಿನಾದ್ಯಂತ ನಡೆಯುವ ಗೌರಿ ಗಣೇಶ ಹಬ್ಬದ ಪ್ರಯುಕ್ತ ಆಯೋಜಿಸಿದ್ದ ಶಾಂತಿ ಸಭೆಯಲ್ಲಿ ಮಾತನಾಡಿ ಸರ್ಕಾರದ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಪಟ್ಟಣ ಸೇರಿದಂತೆ ತಾಲೂಕಿನ ಸುತ್ತಮುತ್ತಲಿನ ಪ್ರದೇಶದಲ್ಲಿ ಡಿಜೆ ಸೌಂಡ್ ಸಿಸ್ಟಮ್‌ಗೆ ಅನುಮತಿ ನೀಡಲಾಗುವುದಿಲ್ಲ. ನಿಯಮ ಉಲ್ಲಂಘಿಸಿದ್ದಲ್ಲಿ ಅಂಥವರ ವಿರುದ್ಧ ಕಾನೂನು ಕ್ರಮವನ್ನು ತೆಗೆದುಕೊಳ್ಳಲಾಗುವುದು. ಸಾರ್ವಜನಿಕರಿಗೆ ತೊಂದರೆ ಹಾಗೂ ಸಂಚಾರ ದಟ್ಟಣೆಯಾಗದಂತೆ ನೋಡಿಕೊಳ್ಳಬೇಕು. ಬಲವಂತವಾಗಿ ಚಂದಾ ವಸೂಲಿ ಮಾಡಬಾರದೆಂದು ತಿಳಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ತಹಶೀಲ್ದಾರ ಫಿರೋಜಷಾ ಸೋಮನಕಟ್ಟಿ ಮಾತನಾಡಿ, ತಾಲೂಕಿನಾದ್ಯಂತ ಇನ್ನೊಬ್ಬರ ಭಾವನೆಗೆ ಯಾವುದೇ ರೀತಿಯ ತೊಂದರೆ-ಯಾಗದಂತೆ ಸೌಹಾರ್ದತೆ ಹಾಗೂ ಶಾಂತಿಯಿಂದ ಹಬ್ಬ ಆಚರಿಸಬೇಕು. ಪಿಓಪಿ ಗಣೇಶನ ಮೂರ್ತಿ ಬದಲಾಗಿ ಪರಿಸರ ಸ್ನೇಹಿ ವಿಗ್ರಹಗಳನ್ನು ಪ್ರತಿಷ್ಠಾಪಿಸಬೇಕು. ಅಶ್ಲೀಲ ನೃತ್ಯಗಳಿಗೆ ಅವಕಾಶ ನೀಡಬಾರದು ಎಂದು ಹೇಳಿದರು.

ಸಭೆಯಲ್ಲಿ ಪುರಸಭೆ ಉಪಾಧ್ಯಕ್ಷ ಸುಭಾಸ ಮಾಳಗಿ, ರೈತ ಮುಖಂಡ ಗಂಗಣ್ಣ ಎಲಿ, ಪುರಸಭೆ ಮುಖ್ಯಾಧಿಕಾರಿ ವಿನಯಕುಮಾರ ಹೊಳೆಪ್ಪಗೋಳ, ಹೆಸ್ಕಾಂ ಇಂಜನೀಯರ ಮಾಲತೇಶ ಕುರುಬಗೊಂಡ, ಅಗ್ನಿ ಶಾಮಕ ದಳದ ಎಸ್.ಎಂ. ಕುಮಾರಸ್ವಾಮಿ, ಪಿಎಸ್ಐ ಬಿ.ಎಸ್.ಅರವಿಂದ, ಧುರೀಣ-ರಾದ ಸುರೇಶ ಆಸಾದಿ, ಮೌನೇಶ ಕಮ್ಮಾರ, ಪಾಂಡು ಸುತಾರ ಸೇರಿದಂತೆ ವಿವಿಧ ಗಣೇಶೋತ್ಸವ ಸಮಿತಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಆರೋಗ್ಯಪೂರ್ಣ ಜೀವನಕ್ಕೆ ಕ್ರೀಡೆ ಅತ್ಯಗತ್ಯ

**ಧಾರವಾಡ :** ಕ್ರೀಡಾಸಕ್ತಿ ಇರುವ ಮಕ್ಕಳನ್ನು ಗುರುತಿಸಿ ಸಮಾಜದ ಮುಖ್ಯ ವಾಹಿನಿಗೆ ತರುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಆರೋಗ್ಯ ಪೂರ್ಣ ಜೀವನಕ್ಕೆ ಕ್ರೀಡೆ ಅತ್ಯಗತ್ಯವಾಗಿದೆ ಎಂದು ಕರ್ನಾಟಕ ಬಾಲ ವಿಕಾಸ ಅಕಾಡೆಮಿ ಅಧ್ಯಕ್ಷ ಸಂಗಮೇಶ್ ಬಬಲೇಶ್ವರ ಹೇಳಿದರು.

ಅವರು ಆರ್.ಎನ್.ಶೆಟ್ಟಿ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಯೋಗದಲ್ಲಿ ಆಯೋಜಿಸಲಾಗಿದ ರಾಷ್ಟ್ರೀಯ ಕ್ರೀಡಾ ದಿನಾಚರಣೆ ಉದ್ಘಾಟಿಸಿ, ಮಾತನಾಡಿದರು.

ಮಕ್ಕಳಲ್ಲಿ ಒಬ್ಬ ಮೇಜರ್ ಧ್ಯಾನ್‌ಚಂದ್ ಅವರು ಹುಟ್ಟಿ ಬರಲಿ ಎನ್ನುವುದು ನಮ್ಮೆಲ್ಲರ ಸದಾಶಯವಾಗಿದೆ ಮಕ್ಕಳಲ್ಲಿಯ ಕ್ರೀಡಾಸಕ್ತಿ ಗುರುತಿಸಿ ನೀರೆ-ರೆದು ಬೆಳೆಸಿದರೆ ಅದ್ಭುತ ಫಲಿತಾಂಶವನ್ನ ಕ್ರೀಡಾ ಜಗತ್ತಿನಲ್ಲಿ ಪಡೆದುಕೊಳ್ಳಲು ಸಾಧ್ಯವಾಗುತ್ತದೆ ಎಂದು ಅವರು ತಿಳಿಸಿದರು.

ಹುಬ್ಬಳ್ಳಿ ಧಾರವಾಡ ನಗರ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶಾಕಿರ್ ಸನದಿ ಅವರು ಮಾತನಾಡಿ, ಕ್ರೀಡೆಗೆ ಪ್ರೋತ್ಸಾಹಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ ಕ್ರೀಡಾ ಚಟುವಟಿಕೆಗಳಿಗೆ ಬೇಕಾದ ನಿವೇಶನವನ್ನು ಒದಗಿಸಲು ಪ್ರಯತ್ನಿಸುತ್ತೇನೆ. ಕ್ರೀಡಾಪಟುಗಳಿಗೆ ಅಗತ್ಯ ನೆರವು ಕಲ್ಪಿಸುವ ಎಲ್ಲ ಪ್ರಯತ್ನಗಳನ್ನು ಮಾಡೋಣ ಎಂದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಎಂ.ಟಿ. ಮಂಜುನಾಥ ಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಬಾವಿಕಟ್ಟಿ ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಕ್ರೀಡ ಇಲಾಖೆ ತರಬೇತುದಾರರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ಗ್ರೂಪ್ ಎ-ಬಿ ವೃಂದ ಹುದ್ದೆಗಳ ಪೂರ್ವಭಾವಿ ಪರೀಕ್ಷೆಗೆ 4007 ಅಭ್ಯರ್ಥಿಗಳ ನೊಂದಣಿ

**ವಿಜಯಪುರ :** ಕರ್ನಾಟಕ ಲೋಕಸೇವಾ ಆಯೋಗವು ಅಧಿಸೂಚಿಸಿರುವ ಗೆಜೆಟೆಡ್ ಪ್ರೊಬೆಷನರ್ ಗ್ರೂಪ್ ಎ ಮತ್ತು ಬಿ ವೃಂದ್ದ ಹುದ್ದೆಗಳಿಗೆ ಜಿಲ್ಲೆಯ 8 ಪರೀಕ್ಷಾ ಕೇಂದ್ರಗಳಲ್ಲಿ ಇಂದು ನಡೆದ ಪೂರ್ವಭಾವಿ ಪರೀಕ್ಷೆಗೆ ಒಟ್ಟು 4007 ಅಭ್ಯರ್ಥಿಗಳು ನೊಂದಾಯಿಸಿಕೊಂಡಿದ್ದರು.

ಬಾಲಕರ ಸರಕಾರಿ ಪದವಿಪೂರ್ವ ಕಾಲೇಜ್, ಬಾಲಕಿಯರ ಸರಕಾರಿ ಪದವಿಪೂರ್ವ ಕಾಲೇಜ್, ವಿದ್ಯಾನಿಕೇತನ ಪ.ಪೂ. ಕಾಲೇಜ್, ಬಿಡಿಇ ಬಾಲಕಿಯರ ಪ್ರೌಢಶಾಲೆ, ಪಿಡಿಜೆ ಪ್ರೌಢಶಾಲೆ, ಸರಕಾರಿ ಪಾಲಿಟೆಕ್ನಿಕ್ ಕಾಲೇಜ್, ವ್ಹಿ.ಬಿ.ದರಬಾರ ಪ.ಪೂ.ಕಾಲೇಜ್ ಹಾಗೂ ಅಂಜುಮನ್ ಕಲಾ & ವಾಣಿಜ್ಯ ಮಹಾವಿದ್ಯಾಲಯ ಸೇರಿದಂತೆ ಒಟ್ಟು 8 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳು ಜರುಗಿದ್ದು, ಪತ್ರಿಕೆ-1ಕ್ಕೆ 2928 ಹಾಗೂ ಪತ್ರಿಕೆ-2ಕ್ಕೆ 2914 ಅಭ್ಯರ್ಥಿಗಳು ಹಾಜರಾಗಿ, ಪತ್ರಿಕೆ-1ಕ್ಕೆ 1079 ಹಾಗೂ ಪತ್ರಿ-ಕೆ-2ಕ್ಕೆ 1093 ಅಭ್ಯರ್ಥಿಗಳು ಗೈರು ಹಾಜರಾಗಿದ್ದರು ಎಂದು ಪ್ರಕಟಣೆ ತಿಳಿಸಿದೆ.

# ವಿಶ್ವ ಸೊಳ್ಳೆ ದಿನ: ವಸತಿ ಶಾಲೆಯಲ್ಲಿ ಅರಿವು ಕಾರ್ಯಕ್ರಮ



**ಕೊಪ್ಪಳ :** ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳ ಕಚೇರಿ, ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಹಿಂದುಳಿದ ವರ್ಗಗಳ ಮುರಾರ್ಜಿ ದೇಸಾಯಿ ವಸತಿ ಶಾಲೆ, ಹಿರೇಕಾಸನಕಂಡಿ ಇವರ ಸಂಯುಕ್ತಾಶ್ರಯದಲ್ಲಿ ಹಿಂದುಳಿದ ವರ್ಗಗಳ ಮುರಾರ್ಜಿ ದೇಸಾಯಿ ವಸತಿ ಶಾಲೆಯ ಸಭಾ ಆವರಣದಲ್ಲಿ ಇತ್ತೀಚೆಗೆ “ವಿಶ್ವ ಸೊಳ್ಳೆ ದಿನ” ಕಾರ್ಯಕ್ರಮ ಮೂಲಕ ಅರಿವು ಮೂಡಿಸಲಾಯಿತು.

ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಶಿವಾನಂದ ವ್ಹಿ.ಪಿ ಅವರು ಮಾತನಾಡಿ, ಈ ಕಾರ್ಯಕ್ರಮದ ಉದ್ದೇಶ ಮಳೆಗಾಲ ಇರುವ ಕಾರಣ ಶುದ್ಧ ನೀರಿನಲ್ಲಿ ಸೋಂಕಿತ ಈಡಿಸ್ ಜಾತಿಯ ಸೊಳ್ಳೆಗಳು ಮೊಟ್ಟೆಗಳನ್ನಿಟ್ಟು ಸಂತಾನಾಭಿವೃದ್ಧಿ ಮಾಡುತ್ತವೆ. ನಂತರ ಮನುಷ್ಯರಿಗೆ ಕಚ್ಚುವುದರಿಂದ ಡೆಂಗ್ಯು ಖಾಯಿಲೆ ಹರಡುತ್ತದೆ. ಈ ರೋಗದ ಲಕ್ಷಣಗಳು ತಲೆನೋವು, ವಾಂತಿ, ಕಣ್ಣಿನ ಹಿಂಭಾಗದಲ್ಲಿ ನೋವು, ಮೈಮೇಲೆ ಬಿಲ್ಲೆ ಆಕಾರದ ಕೆಪ್ಪು ಗಂಧೆಗಳು, ಕಪ್ಪು ಮಲವಿಸರ್ಜನೆ, ವಸಡುಗಳಲ್ಲಿ ರಕ್ತಸ್ರಾವ ಇಂತಹ ಲಕ್ಷಣಗಳಿದ್ದರೆ ತಮ್ಮ ಸಮೀಪದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ, ರಕ್ತ ಪರೀಕ್ಷೆ ಮಾಡಿಸಿ, ಖಚಿತ ಪಟ್ಟರೆ ಚಿಕಿತ್ಸೆ ಪಡೆದುಕೊಳ್ಳಬೇಕು.

ಯಾವುದೇ ಕಾರಣಕ್ಕೂ ಜ್ವರದ ಬಗ್ಗೆ ನಿರ್ಲಕ್ಷತನ ಮಾಡಬಾರದು. ಶಾಲಾ ವಿದ್ಯಾರ್ಥಿಗಳು ತಮ್ಮ ತಮ್ಮ ಮನೆ, ಶಾಲೆ, ವಸತಿ ನಿಲಯಗಳಲ್ಲಿರುವ ನೀರು ಶೇಖರಿಸುವ ಡ್ರಮ್, ಬ್ಯಾರಲ್, ಸಿಮೆಂಟ್ ತೊಟ್ಟೆ, ಕಲ್ಲಿನದೋಣಿ ಇನ್ನಿತರ ನೀರು ಸಂಗ್ರಹ ಪರಿಕರಗಳನ್ನು ವಾರದಲ್ಲಿ 2 ಬಾರಿ ಸ್ವಚ್ಚವಾಗಿ ತೊಳೆದು. ಒಣಗಿಸಿ ಪುನಃ ನೀರು ತುಂಬಬೇಕು. ಪ್ರತಿ ಶುಕ್ರವಾರ ಡ್ರೈ ಡೆ ಮಾಡಬೇಕು. ನೀರಿನ ಸಲಕರಣೆಗಳಿಗೆ ಭದ್ರವಾಗಿ ಮುಚ್ಚಳದಿಂದ ಅಥವಾ ಬಟ್ಟೆ ಕಟ್ಟಬೇಕು. ಸಾಯಂಕಾಲ ವೇಳೆ ಮನೆಯ ಮುಂದೆ ಬೇವಿನ ಸೊಪ್ಪಿನ ಹೊಗೆ ಹಾಕಬೇಕು. ಸೊಳ್ಳೆ ಕಡಿತದಿಂದ ದೂರವಿರಲು ವೈಯಕ್ತಿಕ ರಕ್ಷಣೆ ಮಾಡಿಕೊಳ್ಳಬೇಕು.

ಮನೆಯ ಸುತ್ತ ಮುತ್ತಲು ನೀರು ನಿಲ್ಲದಂತೆ ಎಚ್ಚರಿಕೆವಹಿಸಬೇಕು. ಲಾರ್ವಾ ನಾಶಕ್ಕಾಗಿ ಸ್ವಚ್ಚಗೊಳಿಸುತ್ತಿರಬೇಕು. ಆರೋಗ್ಯ ಇಲಾಖೆ ಸಿಬ್ಬಂದಿಗಳು ಮತ್ತು ಆಶಾ ಕಾರ್ಯಕರ್ತೆಯರು ತಮ್ಮ ಮನೆಗೆ ಬೇಟಿ ನೀಡಿದಾಗ ಸಹಕರಿಸಿ, ಕೈಜೋಡಿಸಲು ತಿಳಿಸಿದರು.

“ಸೊಳ್ಳೆ ನಿಯಂತ್ರಣ ಪ್ರತಿಯೊಬ್ಬರ ಜವಾಬ್ದಾರಿ” ತಮ್ಮ ಮನೆಯ ಸುತ್ತ-ಮುತ್ತ ತ್ಯಾಜ್ಯ ವಸ್ತುಗಳಾದ ಟೈರ್, ಒರಳುಕಲ್ಲು, ತೆಗ್ಗಿನ ಚಿಪ್ಪು, ಹೊಡೆದ ಪ್ಲಾಸ್ಟಿಕ್ ಬಕೆಟ್ ಇತ್ಯಾದಿಗಳನ್ನು ಬಿಸಾಡಬಾರದು. ಸ್ವಚ್ಚತೆ ಕಾಪಾಡಬೇಕು. ಅನಾಫೀಲಿಸ್ ಸೋಂಕಿತ ಹೆಣ್ಣು ಮಲೇರಿಯಾ ಖಾಯಿಲೆ, ಕ್ಯೂಲೇಸ್ ಜಾತಿಯ ಸೊಳ್ಳೆಯಿಂದ ಆನೆಕಾಲು ರೋಗ ಮತ್ತು ಮೆದುಳು ಜ್ವರವನ್ನು ತಡೆಗಟ್ಟಬಹುದು ಎಂದು ಹೇಳಿದರು.

ವಸತಿ ಶಾಲೆಯ ಪ್ರಾಂಶುಪಾಲರಾದ ಮಂಜುನಾಥ ಬೇಳೂರು ಅವರು ಮಾತನಾಡಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಾಕಾಂಕ್ರಮಿಕ ರೋಗಗಳ ನಿಯಂತ್ರಕ್ಕಾಗಿ ಹಮ್ಮಿಕೊಳ್ಳುವ ಇಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಗಿವೆ. ವಿದ್ಯಾರ್ಥಿಗಳು ಇಂತಹ ಕಾರ್ಯಕ್ರಮಗಳ ಸದುಪಯೋಗ ಪಡೆದುಕೊಂಡು ತಮ್ಮ ತಮ್ಮ ಗ್ರಾಮಗಳಲ್ಲಿ, ವಾರ್ಡ್‌ಗಳಲ್ಲಿ ಹಾಗೂ ಸುತ್ತ-ಮುತ್ತಲಿನ ಸಾರ್ವಜನಿಕರಿಗೆ ಅರಿವು ಮೂಡಿಸುವಂತೆ ಕರೆ ನೀಡಿದರು.

ಕಾರ್ಯಕ್ರಮದಲ್ಲಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಎನ್.ವಿ.ಬಿ.ಡಿ.ಸಿ.ಪಿ ಸಿಬ್ಬಂದಿಯಾದ ಶ್ರೀನಿವಾಸ ಸೇರಿದಂತೆ ಹಾಸ್ಟೆಲ್ ನಿಲಯಪಾಲಕರು, ಇತರೆ ಶಿಕ್ಷಕರು, ಆಶಾ ಕಾರ್ಯಕರ್ತೆಯರು, ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಶಿಕ್ಷಕರಾದ ಸಂತೋಷ ಕವಲೂರು ಅವರು ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು.

# ನಂದೀಶ್ವರ ಶಾಲೆಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ




**ಕೊಪ್ಪಳ :** ನಗರದ ನಂದೀಶ್ವರ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಲಾದ ಶ್ರೀಕೃಷ್ಣ ಜನ್ಮಾಷ್ಟಮಿಯನ್ನು ಸೋಮವಾರದಂದು ಆಚರಿಸಲಾಯಿತು ಪುಟ್ಟ ಮಕ್ಕಳು ವೇಷ ಭೂಷಣ ಧರಿಸಿ ಗಮನ ಸೆಳೆಯಿತು ಈ ಸಂದರ್ಭದಲ್ಲಿ, ಕೊಪ್ಪಳ ಇನ್ನರ್ ವ್ಹೀಲ್ ಕ್ಲಬ್ ಪದಾಧಿಕಾರಿಗಳು ಉತ್ಸವದಲ್ಲಿ ಭಾಗವಹಿಸಿದ್ದರು.

30 ಜನ ಪುಟ್ಟ ವಿದ್ಯಾರ್ಥಿಗಳು ರಾಧಾ-ಕೃಷ್ಣರಂತೆ ಸೊಬಗಿನಿಂದ ಅಲಂಕೃತಗೊಂಡು, ಕಾರ್ಯಕ್ರಮಕ್ಕೆ ಮೆರಗು ನೀಡಿದರು. ಈ ಕಾರ್ಯಕ್ರಮದಲ್ಲಿ ಕೊಪ್ಪಳ ಇಂದರವಿಲ್ ಕ್ಲಬ್ ಪದಾಧಿಕಾರಿಗಳು ಪಾಲ್ಗೊಂಡು ಮಕ್ಕಳಿಗೆ ಬಹುಮಾನ ನೀಡಿ ಪ್ರೋತ್ಸಾಹಿಸಿದರು.

ಈ ಸಂದರ್ಭದಲ್ಲಿ ಕೊಪ್ಪಳ ಎನ್ನರವಿಲ್ ಕ್ಲಬ್ ಅಧ್ಯಕ್ಷರಾದ ಉಮಾ ಮಹೇಶ್ ತಂಬ್ರಹಳ್ಳಿ ಕಾರ್ಯದರ್ಶಿ ಮೀನಾಕ್ಷಿ ಬಣ್ಣದ ಬಾವಿ ಉಪಾಧ್ಯಕ್ಷ ಮಧು ಶೆಟ್ಟರ್ ಖಜಾಂಚಿ ಆಶಾ ಕೌಲೂರ್ ಐ ಎಸ್ ಓ ಮಧು ನಿಲೋಗಲ್ ಕಾರ್ಯಕಾರಿಣಿ ಮಂಡಳಿ ಸದಸ್ಯರಾದ ನಿತ ತಂಬ್ರಹಳ್ಳಿ ಪದ್ಮ ಜೈನ್ ಸದಸ್ಯರಾದ ಸುಮಂಗಲ ಎಚ್, ಅನಿತಾ ಬಜಾರ್ ಮಠ ಜ್ಯೋತಿ ಮಟ್ಟಿ ಶೋಭಾ ಮತ್ತು ಲತಾ ಉಲ್ಲತಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

# ಕೊಪ್ಪಳ ಜಿಲ್ಲಾ ಉತ್ಸವದಲ್ಲಿ ತಂಬ್ರಹಳ್ಳಿ ಹಾಗೂ ಬಣ್ಣದ ಬಾವಿಗೆ ಸನ್ಮಾನ



**ಕೊಪ್ಪಳ :** ನಗರದ ಸಾಹಿತ್ಯ ಭಾವನದಲ್ಲಿ ಕೊಪ್ಪಳ ಜಿಲ್ಲಾ ನಾಗರಿಕರ ವೇದಿಕೆ ವತಿಯಿಂದ ರವಿವಾರ ಸಂಜೆ ಜರುಗಿದ ಕೊಪ್ಪಳ ಜಿಲ್ಲಾ ಉತ್ಸವದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಕೊಪ್ಪಳ ಇನ್ನರ್ ವೀಲ್ ಕ್ಲಬ್ಬಿನ ಅಧ್ಯಕ್ಷರಾದ ಉಮಾ ಮಹೇಶ್ ತಂಬ್ರಹಳ್ಳಿ ಮತ್ತು ಕಾರ್ಯದರ್ಶಿ, ಮೀನಾಕ್ಷಿ ಬಣ್ಣದ ಬಾವಿ ಅವರಿಗೆ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಕೊಪ್ಪಳ ಜಿಲ್ಲಾ ನಾಗರಿಕರ ವೇದಿಕೆ ಅಧ್ಯಕ್ಷರಾದ ಜಿಎಸ್ ಗೋನಾಳ್ ತಿರುಳು ಕನ್ನಡ ಸಾಹಿತ್ಯ ವೇದಿಕೆ ಜಿಲ್ಲಾಧ್ಯಕ್ಷ ಎಮ್ ಸಾಧಿಕ್ ಅಲಿ ಕಾರ್ಯಕ್ರಮ ಸಂಘಟಕ ಮಹೇಶ್ ಬಾಬು ಸುರುವೇ ವೇದಿಕೆ ಗೌರವಾಧ್ಯಕ್ಷ ಎಂಬಿ ಅಳವಂಡಿ ಉಪಾಧ್ಯಕ್ಷ ಸಿದ್ದಪ್ಪ ಹಂಚಿನಾಳ ಸಮ್ಮೇಳನದ ಅಧ್ಯಕ್ಷ ಎಲ್ಲಪ್ಪ ಬಡಿಗೇರ್ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

# ಗಜೇಂದ್ರಗಡ ಸ್ನೇಹಿತರ ಬಳಗದಿಂದ ಪಟೇಲ್‌ಗೆ ಸನ್ಮಾನ



**ಕೊಪ್ಪಳ :** ನಗರ ಸಭೆಗೆ ನೂತನವಾಗಿ ಅಧ್ಯಕ್ಷರಾಗಿ ಜಯ ಸಾಧಿಸಿದ ಅಮ್ಜದ್ ಪಟೇಲ್ ರವರಿಗೆ ಪಕ್ಕದ ಗದಗ್ ಜಿಲ್ಲೆಯ ಗಜೇಂದ್ರಗಡ ಪಟ್ಟಣದ ಅವರ ಸ್ನೇಹಿತರ ಬಳಗ ಮತ್ತು ಸಂಬಂಧಿಕರ ಬಳಗ ದ ವತಿಯಿಂದ ರವಿವಾರ ಕೊಪ್ಪಳದಲ್ಲಿ ಸನ್ಮಾನಿಸಲಾಯಿತು. ಅಮ್ಜದ್ ಪಟೇಲ್ ರವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಕೇಂದ್ರವಾದ ಕೊಪ್ಪಳ ನಗರ ಸರ್ವಾಂಗೀಣ ಅಭಿವೃದ್ಧಿ ಹೊಂದಲಿ ಒಳ್ಳೆಯ ಕಾರ್ಯ ಇವರ ಅಧಿಕಾರ ಅವಧಿಯಲ್ಲಿ ಹೆಚ್ಚು ಹೆಚ್ಚು ಜರುಗಲಿ ಎಂದು ದಾದು ಅತ್ತಾರ್ ಆಶಯ ವ್ಯಕ್ತಪಡಿಸಿ ಎಲ್ಲಾ ಸ್ನೇಹಿತರ ಪರವಾಗಿ ಸನ್ಮಾನಿಸಿ ಶುಭ ಕೋರಿದರು. ಈ ಸಂದರ್ಭದಲ್ಲಿ ಗಜೇಂದ್ರಗಡ ಪಟ್ಟಣದ ಪೀರ್ ಸಾಬ್ ಅಣ್ಣಿಗೇರಿ, ಸುಭಾನ್ ಸಂತು, ಸಲೀಂ ಕಿಲ್ಲೆದಾರ್, ಅಲ್ತಾಫ್ ವಾಸ್ ಮನಿ ಸೇರಿದಂತೆ ಕಾರ್ಯಕರ್ತರು ಸ್ನೇಹಿತರು ಅಭಿಮಾನಿಗಳು ಪಾಲ್ಗೊಂಡಿದ್ದರು.

# ಅರಿವು ವಿಧ್ಯಾಭ್ಯಾಸ ಸಾಲ ರಿನ್ಯೂವಲ್ ಯೋಜನೆ: ಅರ್ಜಿ ಆಹ್ವಾನ

**ಕೊಪ್ಪಳ :** ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ 2024-25ನೇ ಸಾಲಿನ ಅರಿವು ವಿದ್ಯಾಭ್ಯಾಸ ಸಾಲ (ರಿನ್ಯೂವಲ್) ಯೋಜನೆಯಡಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದಸಿಇಟಿ,ಡಿ-ಸಿಇಟಿ,ಪಿಜಿ-ಸಿಇಟಿ,ನೀಟ್‌ಮೂಲಕಪದವಿ ಮತ್ತು ಸ್ನಾತಕೋತ್ತರ ಕೋರ್ಸಗಳಾದ ವೈದ್ಯಕೀಯ (ಎಂ.ಬಿ.ಬಿ.ಎಸ್, ಎಮ್.ಡಿ. ಎಮ್,ಎಸ್) ದಂತ ವೈದ್ಯಕೀಯ (ಬಿ,ಡಿ.ಎಸ್/ಎಂಡಿ.ಎಸ್), ಆಯುಷ್ (ಬಿ.ಆಯುಷ್, ಎಂ.ಆಯುಷ್), ಇಂಜಿನಿಯರಿಂಗ್ & ಟೆಕ್ನಾಲಜಿ (ಬಿ.ಇ/ಬಿ.ಟೆಕ್, ಎಮ್.ಇ, ಎಂ.ಟೆಕ್), ಬ್ಯಾಚುಲರ್ ಆಫ್ ಆರ್ಕಿಟೆಕ್ಚರ್(ಬಿ.ಆರ್ಕ,ಎಂ.ಆರ್ಕ್),ಎಂಬಿಎ,ಎಂಸಿಎ,ಎಲ್.ಎಲ್.ಬಿ., ಬಿಎಸ್ಸಿ ಹಾರ್ಟಿಕಲ್ಚರ್, ಅಗ್ರಿಕಲ್ಚರ್ ಇಂಜಿನಿಯರಿಂಗ್, ಡ್ರೈರಿ ಟೆಕ್ನಾಲಜಿ, ಫಾರೆಸ್ಟರಿ, ವೆಟರ್ನರಿ & ಎನಿಮಲ್ಸ್ ಟೆಕ್ನಾಲಜಿ, ಮೀನುಗಾರಿಕೆ, ರೇಷ್ಮೆಕೃಷಿ, ಹೋಮ್/ಕಮ್ಯುನಿಟಿ ಸೈನ್ಸಸ್ ಫುಡ್ ನ್ಯೂಟ್ರಿಷನ್ & ಡಯೆಟಿಕ್ಸ್, ಬಿ.ಫಾರ್ಮಾ, ಎಂ.ಫಾರ್ಮಾ, ಫಾರ್ಮಾ.ಡಿ & ಡಿ.ಫಾರ್ಮಾಗಳಲ್ಲಿ ಆಯ್ಕೆಯಾಗಿರುವಂತಹ ಅಲ್ಪಸಂಖ್ಯಾತರ ವಿದ್ಯಾರ್ಥಿಗಳು ಅರಿವು (ರಿನ್ಯೂವಲ್) ಸಾಲ ಯೋಜನೆಯಡಿ ಅರ್ಜಿ ಸಲ್ಲಿಸಬೇಕು. ಅರ್ಜಿಯನ್ನು ಸಲ್ಲಿಸುವಾಗ ನಿಗಮದಿಂದ ಈ ಹಿಂದಿನ ವರ್ಷದಲ್ಲಿ ಪಡೆದಿರುವ ಸಾಲದ ಮೊತ್ತದ ಶೇ.12 ರಷ್ಟನ್ನು ಪಾವತಿಸಬೇಕಾಗುತ್ತದೆ. ಶೇ.12ರಷ್ಟು ಮೊತ್ತವನ್ನು ಆನ್‌ಲೈನ್ ಮುಖಾಂತರ ಪಾವತಿಸಬಹುದು. ಅರ್ಹ ವಿದ್ಯಾರ್ಥಿಗಳು ವೆಬ್‌ಸೈಟ್ kmdconline.karnataka.gov.inನಲ್ಲಿ ಅಕ್ಟೋಬರ್ 31 ರೊಳಗಾಗಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ನಿಗಮದ ಜಿಲ್ಲಾ ವ್ಯವಸ್ಥಾಪಕರನ್ನು ಅಥವಾ ದೂರವಾಣಿ ಸಂಖ್ಯೆ: 08539-225008ಗೆ ಸಂಪರ್ಕಿಸಬಹುದಾಗಿದೆ ಎಂದು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಕೊಪ್ಪಳ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಯುವ ಸಮೂಹ ಸ್ವಾಸ್ಥ್ಯ ಸಂಕಲ್ಪಕ್ಕೆ ಬದ್ಧರಾಗಬೇಕು: ರಾಘವೇಂದ್ರ ನೀಲನ್ನವರ



**ಮಹಾಲಿಂಗಪುರ :** ಪಟ್ಟಣದ ಸರಕಾರಿ ಪ್ರೌಢ ಶಾಲೆಯಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮುಧೋಳ, ಅಖಿಲ ಕರ್ನಾಟಕ ಜನ ಜಾಗೃತಿ ವೇದಿಕೆ ಬೆಳ್ತಂಗಡಿ, ಜಿಲ್ಲಾ ಜನಜಾಗೃತಿ ವೇದಿಕೆ ಬಾಗಲಕೋಟೆ ಇವರ ಸಂಯುಕ್ತಾಶ್ರಯದಲ್ಲಿ ಆಶ್ರಯದಲ್ಲಿ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮ ಜರುಗಿತು.

ಕಾರ್ಯಕ್ರಮ ಉದ್ಘಾಟಿಸಿದ ಯೋಗಶಿಕ್ಷಕ ರಾಘವೇಂದ್ರ ನೀಲನ್ನವರ ಮಾತನಾಡಿ ಯುವಕರು ಸ್ವಾಸ್ಥ್ಯ ಸಂಕಲ್ಪಕ್ಕೆ ಬದ್ಧರಾಗಬೇಕು ಅಂದಾಗ ಮಾತ್ರ ಸದೃಢವಾದ ಭಾರತವನ್ನು ಕಟ್ಟಲು ಸಾಧ್ಯವಾಗುತ್ತದೆ. ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘವು ಪ್ರತಿ ಪ್ರೌಢ ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವದು ಶ್ಲಾಘನೀಯ. ವಿದ್ಯಾರ್ಥಿಗಳು ಮೊಬೈಲ್ ನಿಂದ ದೂರವಿದ್ದು, ಪುಸ್ತಕವನ್ನು ಓದುವ ಹವ್ಯಾಸವನ್ನು ಬೆಳಸಿಕೊಳ್ಳಬೇಕು,ಆರೋಗ್ಯ ಸಂಪತ್ತು ನಮ್ಮದಾದರೆ ಸಾಧನೆ ವೇಗ ಹೆಚ್ಚುತ್ತದೆ ಎಂದರು.

ಅಧ್ಯಕ್ಷತೆವಹಿಸಿದ್ದ ಮುಖ್ಯಗುರು ಧನಂಜಯ ಬಿ .ಕುಲಕರ್ಣಿ ಮಾತನಾಡಿ ಧರ್ಮಸ್ಥಳ ಸಂಘದ ಕಾರ್ಯವು ಜನಪ್ರಿಯವಾಗಿದೆ, ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮಗಳನ್ನು ಆಯೋಜಿಸಿದ್ದು ವಿದ್ಯಾರ್ಥಿ ಸಮೂಹಕ್ಕೆ ಅತಿ ಅವಶ್ಯವಾದ ವಿಷಯವನ್ನು ಪ್ರಸ್ತುತಪಡಿಸಿದೆ. ಆದರಿಂದ ವಿದ್ಯಾರ್ಥಿಗಳು ಎಲ್ಲಾ ವಿಚಾರಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ವಲಯ ಮೇಲ್ವಿಚಾರಕರಾದ ಮಲ್ಲಿಕಾರ್ಜುನ ವಜ್ರಮಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು.ಶಿಕ್ಷಕರಾದ ಸದಾಶಿವ ಕಂಬಾರ, ಎಂ.ಜಿ.ಅಲ್ಲಾಖಾನ ಮಾತನಾಡಿದರು.

ಶಿಕ್ಷಕರಾದ ಭಾರತಿ ಜಿರಲಿ, ರಾಜೇಶ್ವರಿ ಜಾಲಿಗಿಡ, ರಾಜೇಶ್ವರಿ ಬೀಳಗಿ, ರಮೇಶ ಕಂಬಾರ, ಪ್ರಶಾಂತ ಬಡಿಗೇರ, ಸ್ಥಳೀಯ ಸೇವಾ ಪ್ರತಿನಿಧಿ ಭಾರತಿ ಕದ್ದಿಮನಿ ಮತ್ತು ವಿದ್ಯಾರ್ಥಿಗಳು ಇದ್ದರು.



**ರಬಕವಿ–ಬನಹಟ್ಟಿ : ಬನಹಟ್ಟಿಯ ಮಂಗಳವಾರ ಪೇಟೆಯ ಮನೆಯೊಂದರಲ್ಲಿ ಶ್ರಾವಣ ಮಾಸದ ಕೊನೆಯ ಶುಭ ಶುಕ್ರವಾರದಂದು ಮಹಿಳೆಯರು ಮನೆ ಮನೆಗೆ ತೆರಳಿ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.**

# ಒಳಮೀಸಲಾತಿ ಜಾರಿಗೊಳಿಸಬೇಕೆಂದು ಆಗ್ರಹಿಸಿ ಬೃಹತ್ ಬಹಿರಂಗ ಸಭೆ

**ಬೀಳಗಿ :** ಒಳಮೀಸಲಾತಿಯ ಸುಪ್ರಿಂ ಕೋರ್ಟ ಆದೇಶದಂತೆ ಜಾರಿ ಮಾಡದಿದ್ದರೆ ರಾಜ್ಯ ಸರಕಾರದ ವಿರುದ್ಧ ಬೀದಿಗೆ ಇಳಿಯಬೇಕಾಗುತ್ತದೆ. ನಮ್ಮ ಸಮುದಾಯದ ಸಚಿವರನ್ನು ರಾಜೀನಾಮೆ ಕೊಡಿಸಿ ರಾಜ್ಯಾದ್ಯಂತ ಉಗ್ರ ಹೋರಾಟಕ್ಕೆ ಮುಂದಾಗಬೇಕಾಗುತ್ತದೆ ಎಂದು ರಾಜ್ಯ ಸರಕಾರಕ್ಕೆ ಮಾದಿಗ ಮಹಾಸಭಾ ರಾಜ್ಯಾಧ್ಯಕ್ಷ ಮುತ್ತಣ್ಣ ಬೆಣ್ಣೂರ ಎಚ್ಚರಿಕೆ ನೀಡಿದರು.



ಪಟ್ಟಣದಡಾ.ಬಿ.ಆರ್.ಅಂಬೇಡ್ಕರ ವೃತ್ತದಲ್ಲಿ ಮಾದಿಗ ಸಂಘಟನೆಗಳ ಒಕ್ಕೂಟದ ಸಾವಿರಾರು ಕಾರ್ಯಕರ್ತರು ಜಮಾಯಿಸಿ ಸುಪ್ರಿಂ ಕೋರ್ಟ ಆದೇಶದಂತೆ ಒಳ ಮೀಸಲಾತಿಯನ್ನು ಜಾರಿಗೊಳಿಸಬೇಕೆಂದು ಆಗ್ರಹಿಸಿ ತಾಲೂಕಾ ಆಡಳಿತದವರೆಗೆ ಜಾಥಾ ಮಾಡಿ, ಅಲ್ಲಿ ಬೃಹತ್ ಬಹಿರಂಗ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ನಮ್ಮ ಜನಾಂಗ ಶರಣ ಪರಂಪರೆಗೆ ಅನುಗುಣವಾಗಿ, ರೈತರ ಒಡನಾಡಿಯಾಗಿ ಬದುಕು ಕಟ್ಟಿಕೊಂಡವರು. ನಮಗೆ ಆದ ಅನ್ಯಾಯಕ್ಕೆ ನ್ಯಾಯ ಕೇಳುತ್ತೇವೆ. ಒಳ ಮೀಸಲಾತಿ ವಿಷಯದಲ್ಲಿ ಇಂದಿನ ಸರಕಾರ ಅತ್ಯಂತ ವ್ಯವಸ್ಥಿತ ನಿರ್ಲಕ್ಷವಿದೆ. ನಮ್ಮನ್ನು ಇನ್ನಷ್ಟು ಬೀದಿಗೆ ನಿಲ್ಲಿಸುವಂತಿದೆ. ನಾವು ಬೀದಿಗೆ ನೀಲ್ಲೊದಿಲ್ಲ. ನಿಮ್ಮ ಆಲೋಚನೆ, ಕುತಂತ್ರಗಳನ್ನು ಬೀದಿಗೆ ತರುತ್ತೇವೆ ಎಂದು ಗುಡುಗಿದರು.

ಮಾದಿಗ ಮೀಸಲಾತಿ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಶಿವರಾಯ ಅಕ್ಕರಕಿಮಾತನಾಡಿ,ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಾದಿಗ ಸಮುದಾಯವನ್ನು ನಿರ್ಲಕ್ಷಿಸಿರುವ ಕಾರಣ ಒಳಮೀಸಲಾತಿ ಆದೇಶ ಹೊರಡಿಸಲುತಡಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಹಿರಿಯ ಹೋರಾಟಗಾರ ಪ್ರೋ.ಎಂ.ಯು.ಮುಗನೂರ, ಡಿಎಸ್ಎಸ್ ಬೆಳಗಾವಿ ವಿಭಾಗ ಸಂಚಾಲಕ ಬಸವರಾಜ ಅರವಳಿ, ಮಾದಿಗ ಮೀಸಲಾತಿ ಹೋರಾಟ ಸಮಿತಿ ರಾಜ್ಯ ಕಾರ್ಯಾಧ್ಯಕ್ಷ ಸೋಮು ಚೂರಿ, ರಾಜು ಮನ್ನಿಕೇರಿ ಮಾತನಾಡಿದರು.

ಇದಕ್ಕೂಪೂರ್ವಡಾ.ಅಂಬೇಡ್ಕರ್ ವೃತ್ತದಿಂದ ಪ್ರಾರಂಭವಾದ ಮೆರವಣಿಗೆಯಲ್ಲಿ ಹಲಿಗೆ ಬಾರಿಸುತ್ತಸಾಗಿದಸಮುದಾಯದ ಜನರು ತಹಶೀಲ್ದಾರ್ ಕಾರ್ಯಾಲಯದವರೆಗೆ ತೆರಳಿ ಸಭೆಯಾಗಿ ಮಾರ್ಪಟ್ಟಿತು. ಬಳಿಕ ತಹಶೀಲ್ದಾರ್ ಸುಹಾಸ ಇಂಗಳೆ ಅವರ ಮೂಲಕ ರಾಜ್ಯದ ಮುಖ್ಯಮಂತ್ರಿ ಅವರಿಗೆ ಮನವಿ ಸಲ್ಲಿಸಿದರು.

ದಲಿತಸಂಘರ್ಷಸಮಿತಿಬೆಳಗಾವಿ ಸಂಚಾಲಕ ಮಹೇಶ ಹುಗ್ಗಿ, ಮಾದಿಗ ಮೀಸಲಾತಿ ಹೋರಾಟ ಸಮಿತಿ ಬೆಳಗಾವಿ ವಿಭಾಗದ ಮುಖ್ಯಸ್ಥ ಬಸವರಾಜ ಅರವಳಿ, ನ್ಯಾಯವಾದಿ ಶಿವಾನಂದ ಟವಳಿ, ಎಂ ಆರ್ ಎಚ್ ಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಸೋಮು ಚೂರಿ, ಮಾದಿಗ ಮೀಸಲಾತಿ ಹೋರಾಟ ಸಮಿತಿಯ ತಾಲೂಕ ಮುಖಂಡ ಶಿವಾನಂದ ಬಿಸನಾಳ, ರಾಜು ಮನ್ನಿಕೇರಿ, ಕೃಷ್ಣಾ ವೈ ಮಾದರ, ಸಿದ್ದು ಮಾದರ, ನಾಗೇಶ ಶಿಡ್ಲೆನ್ನವರ, ರಾಯಪ್ಪ ಬಿರಕಬ್ಬಿ, ಯಲ್ಲಪ್ಪ ಶಿರಗುಂಪಿ, ರಮೇಶ ಅನಗವಾಡಿ, ಪ್ರಕಾಶ ಕಾತರಕಿ, ಮಹೇಶ ನಾಗರಾಳ ಭಾಗವಹಿಸಿದ್ದರು.

## ಕಳ್ಳತನ ಮಾಡಿ ಹುದ್ದೆಗೆ ಬಂದಿಲ್ಲ। ಬೇಡವೆಂದರೇ ಬರೋದಿಲ್ಲ। ಅಭಿವೃದ್ಧಿಯಲ್ಲಿ ರಾಜಕೀಯ ಬೇಡ

# ಕಾರ್ಮಿಕರ ನೇಮಕಾತಿಯಲ್ಲಿ ಅವ್ಯವಹಾರ ಸದಸ್ಯರಿಂದ ಆರೋಪ

**ಜಮಖಂಡಿ :** ನಗರಸಭೆಗೆಯಲ್ಲಿ ಹೊರಗುತ್ತಿಗೆ ಕಾರ್ಮಿಕರ ನೇಮಕಾತಿ ಭಾರಿ ಪ್ರಮಾಣದಲ್ಲಿ ಅವ್ಯವಹಾರವಾಗಿದ್ದು,ಓರ್ವ ಕಾರ್ಮಿಕ ನೇಮಕಾತಿಗೆ 50ಸಾವಿರ ಲಂಚ ಪಡೆದುಕೊಂಡಿದ್ದಾರೆ. ಲಂಚಪಡೆದು ನೇಮಕಾತಿ ಮಾಡಿ ಕೊಂಡ ಎನ್.ಜಿ.ಓ.ಸಂಸ್ಥೆಯನ್ನು ರದ್ದುಗೊಳಿಸಿ ಕಪ್ಪುಪಟ್ಟಿಗೆ ಸೇರ್ಪಡೆಗೊಳಿಸಿ ಇಲಾಖೆ ತಣಿಕೆಯಾಗಬೇಕೆಂದು ಆಕ್ರೋಶ ವ್ಯಕ್ತಪಡಿಸಿದರು.

ಸ್ಥಳೀಯ ನಗರಸಭೆ ಕಾರ್ಯಾಲ ಯದ ಸಭಾಭವನದಲ್ಲಿ ಶನಿವಾರ ನೂತನ ಅಧ್ಯಕ್ಷ ಪರಮಾನಂದ ಗವರೋಜಿ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಸದಸ್ಯರ ಮತ್ತು ನಗರಸಭೆ ಅಧಿಕಾರಿಗಳ ನಡುವೆ ಮಾತಿನ ಚಕಮಕಿ ನಡೆಯಿತು

ಶವಯಾತ್ರೆ ವಾಹನ ಖರೀದಿ ಯಾರ ಗಮನಕ್ಕೆ ತರದೇ ವಾಹನ ಕಂಪನಿ ಹೆಸರು, ಇತರೇ ಯಾವುದೇ ಮಾಹಿತಿ ನೀಡದೇ ಟೆಂಡರ ಕರೆದಿರುವ ಹಿನ್ನಲೆಯಲ್ಲಿ ಅದನ್ನು ರದ್ದಗೊಳಿಸುವ ಮೂಲಕ ನಗರಸಭೆ ಪೌರಾಯುಕ್ತರು ಸದಸ್ಯರ ಸಭೆ ಕರೆದು ಚರ್ಚೆ ನಂತರ ಟೆಂಡರ್ ಕರೆಯಬೇಕು ಎಂದು ನಗರಸಭೆ ಸದಸ್ಯರು ಒತ್ತಾಯಿಸಿದರು.

ರಹಿಮತನಗರದಲ್ಲಿ 12 ಲಕ್ಷದಲ್ಲಿ ನಿರ್ಮಿಸಿರುವ ಸಮುದಾಯ ಭವನ ಸಂಪೂರ್ಣ ಕಳಪೆಯಾಗಿದ್ದು, ನಗರಸಭೆ ಅಧಿಕಾರಿಗಳು ಪರಿಶೀಲನೆ ನಂತರ ಗುತ್ತಿಗೆದಾರರಿಗೆ ಬಿಲ್ ಪಾವತಿಸಬೇಕು. ಫಲಾನುಭವಿಗಳ ಆಯ್ಕೆಯಲ್ಲಿ ಗೊಂದಲವಿದ್ದು, ಶ್ರೀಮಂತರ ಮಕ್ಕಳ್ನು ಆಯ್ಕೆ ಮಾಡುವ ಮೂಲಕ



ಸರಕಾರದ ಎಲ್ಲ ಸೌಲಭ್ಯಗಳನ್ನು ಒದಗಿಸುವ ಮೂಲಕ ನಗರಸಭೆ ಅಧಿಕಾರಿಗಳು ತಾರತಮ್ಯ ನೀತಿ ಅನುಸರಿಸುತ್ತಿದ್ದಾರೆ ಆಕ್ರೋಶ ವ್ಯಕ್ತ ಪಡಿಸಿದರು.

ಏಕನಿವೇಶನ ವಿಷಯ ಪ್ರಸ್ತಾಪಗೊಂಡ ನಂತರ ನಗರಸಭೆ ಪೌರಯುಕ್ತ ಮತ್ತು ಸದಸ್ಯರ ನಡುವೆ ಮಾತಿನ ಚಕಮಕಿ ಜೋರಾಗಿ ನಡೆಯಿತು. ಏಕನಿವೇಶನಕ್ಕೆಕನಿಷ್ಠ160ರೂ.ಏರಿಕೆಮಾಡಬೇಕೆಂದು ಪೌರಾಯುಕ್ತರು ಒತ್ತಾಯಿಸಿದಾಗ ಸದಸ್ಯ ಸುನೀಲ ಶಿಂಧೆ ಜನರಿಗೆ ಹೊರಯಾಗಲಿದ್ದು, ಈಗಿರುವ 25ರೂ. ಬದಲಾಗಿ 50ಕ್ಕೆ ಹೆಚ್ಚಿಸಬೇಕೆಂದು ಪಟ್ಟು ಹಿಡಿದರು. ನಂತರ ಪೌರಾಯುಕ್ತರು ಏಕನಿವೇಶನ 160 ರೂ.ಗಳಿಗೆ ಮಾಡಬೇಕಾಗುತ್ತದೆ ಏಕೆಂದರೇ ನಾವು ಎಲ್ಲ ರೀತಿ ನೀಡಬೇಕಾಗುತ್ತದೇ ಎಂಬುದನ್ನು ಸದಸ್ಯರು ಗಮನಿಸಬೇಕೆಂದು ಹೇಳಿದಾಗ ಮತ್ತೇ ಗದ್ದಲದ ವಾತಾವರಣ ಜೋರಾಯಿತು.

ವೇದಿಕೆಯಲ್ಲಿ ನಗರಸಭೆ ಅಧ್ಯಕ್ಷ ಪರಮಾನಂದ ಗವರೋಜಿ, ಶಾಸಕ ಜಗದೀಶ ಗುಡಗುಂಟಿ, ಉಪಾಧ್ಯಕ್ಷ ರೇಖಾ ಕಾಂಬಳೆ, ಪೌರಾಯುಕ್ತ ಜ್ಯೋತಗಿರೀಶ ಸಹಿತ ನಗರಸಭೆ ಸದಸ್ಯರು ಇದ್ದರು.

### ನಾನೇನು ಕಳ್ಳತನ ಮಾಡಿ ಹುದ್ದೆಗೆ ಬಂದಿಲ್ಲ......

ನಾನೇನು ಕಳ್ಳತನ ಮಾಡಿ ಪೌರಾಯುಕ್ತ ಹುದ್ದೆಗೆ ಬಂದಿಲ್ಲ. ಯಾವುದೇ ರೀತಿಯ ಬಿರುಸಿನ ಮಾತುಗಳು ಬೇಡ. ಹೆಚ್ಚುವರಿಯಾಗಿ ಖರ್ಚು ಮಾಡಲು ನಗರಸಭೆ ಉತ್ತಮ ಸ್ಥಿತಿಯಲ್ಲಿಲ್ಲ. ನನಗೆ ಯಾವುದೇ ರೀತಿಯ ಪವರ್ ಇಲ್ಲ, ಚುನಾಯಿತ ನಗರಸಭೆ ಸದಸ್ಯರಿಗೆ ಪವರ್ ಇದೆ.

**–ಜ್ಯೋತಿಗಿರೀಶ, ಪೌರಾಯುಕ್ತರು ಜಮಖಂಡಿ.**

### ಬೇಡ ಎಂದರೇ ಬರೋದಿಲ್ಲ......

ನಾನೇನು ಕಳ್ಳತನ ಮಾಡಿ ಪೌರಾಯುಕ್ತ ಹುದ್ದೆಗೆ ಬಂದಿಲ್ಲ. ಯಾವುದೇ ರೀತಿಯ ಬಿರುಸಿನ ಮಾತುಗಳು ಬೇಡ. ಹೆಚ್ಚುವರಿಯಾಗಿ ಖರ್ಚು ಮಾಡಲು ನಗರಸಭೆ ಉತ್ತಮ ಸ್ಥಿತಿಯಲ್ಲಿಲ್ಲ. ನನಗೆ ಯಾವುದೇ ರೀತಿಯ ಪವರ್ ಇಲ್ಲ, ಚುನಾಯಿತ ನಗರಸಭೆ ಸದಸ್ಯರಿಗೆ ಪವರ್ ಇದೆ.

**–ಮಲ್ಲವ್ವ ಪಾಯಗೊಂಡ, ಸದಸ್ಯರು ಜಮಖಂಡಿ.**

ಸಭೆಗೆ ಬಾ ಎಂದರೇ ಬರತೀವಿ, ಬೇಡ ಎಂದರೇ ಬರೋದಿಲ್ಲ. ಕಳೆದ 15 ತಿಂಗಳಿನಿಂದ ನಿಮ್ಮ ವರ್ತನೆಗಳು ಸಾಕಷ್ಟು ನೋವು ತಂದಿವೆ. ಅಭಿವೃದ್ಧಿಗೆ ಅವಕಾಶ ನೀಡುತ್ತಿಲ್ಲ. ಕಳೆದ 15 ತಿಂಗಳಿನಿಂದ ನಗರಸಭೆ ಜಮಾ–ಖರ್ಚುಗಳ ಮಾಹಿತಿ ಸದಸ್ಯರಿಗೆ ನೀಡಿಲ್ಲ

### ಅಭಿವೃದ್ಧಿಯಲ್ಲಿ ರಾಜಕೀಯ ಬೇಡ......

ಮತಕ್ಷೇತ್ರದ ಅಭಿವೃದ್ಧಿ ಪಡಿಸುವದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಚುನಾವಣೆಸಂದರ್ಭದಕಲ್ಲಿಪಕ್ಷದಘರಾಟನೆಡೆಯಲಿ.ಚುನಾಯಿತಗೊಂಡು ಅಧಿಕಾರಿ ಲಭಿಸಿದಾಗ ಯಾವುದೇ ರಾಜಕೀಯ ಮಾಡುವದು ಬೇಡ. ನಗರ ಮತ್ತುಗ್ರಾಮೀಣಪ್ರದೇಶದಅಭಿವೃದ್ಧಿಗಾಗಿಬಿಜೆಪಿ,ಕಾಂಗ್ರೆಸ್,ಜೆಡಿಎಸ್‌ಪಕ್ಷ ಭೇದಮರೆತುಶ್ರಮಿಸೋಣ.ಪ್ರತಿಯೊಬ್ಬರಿಗೂಸರಕಾರದಸೌಲಭ್ಯಗಳನ್ನು ತಲುಪಿಸುವದು ನಮ್ಮ ಕರ್ತವ್ಯವಾಗಬೇಕು. ಪಕ್ಷಾತೀತವಾಗಿ ಸಹಕಾರ ನೀಡಿದರೇ ನಗರದ ಅಭಿವೃದ್ಧಿಗಾಗಿ ಅನುದಾನ ತರಲು ಸಿದ್ಧನಿದ್ದೇನೆ.

**–ಜಗದೀಶ ಗುಡಗುಂಟಿ, ಶಾಸಕರು ಜಮಖಂಡಿ.**

## ಸಿದ್ದಪ್ಪ ಖಪಲಿ ನಿಧನ




**ಪುಣೆ:** ರಬಕವಿಯ ರಹವಾಸಿ ಯಾಗಿದ್ದ ಬಣಗಾರ (ನಾಗಲಿಕ) ಸಮಾಜದ ಹಿರಿಯರಾಗಿದ್ದ ಸಿದ್ದಪ್ಪ ಖಪಲಿ, ತಮ್ಮ 72ನೆಯ ವಯಸ್ಸಿನಲ್ಲಿ ಆಗಸ್ಟ 30 ರಂದು ಮಧ್ಯಾಹ್ನ 2–30 ಕ್ಕೆ ಪುಣೆಯ ಕ್ಯಾನ್ಸರ್ ಆಸ್ಪತ್ರೆಯಲ್ಲಿ ನಿಧನರಾದರು. ಮೃತರ ಅಂತ್ಯಕ್ರಿಯೆ ಅದೇ ದಿನ ರಾತ್ರಿ 8 ಗಂಟೆಗೆ ಪುಣೆಯ ವೈಕುಂಠ ಸ್ಮಶಾನಭೂಮಿಯಲ್ಲಿ ನೆರವೇರಿತು. ಮೃತರು ತಮ್ಮ ಹಿಂದೆ ಪತ್ನಿ ಲಲಿತಾ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಓರ್ವ ಸಹೋದರ ಮತ್ತು ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ದೇವರು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದು ಧಡಲ್ ಬಾಜಿ ಕನ್ನಡ ದಿನಪತ್ರಿಕೆ ಬಳಗದಿಂದ ಪ್ರಾರ್ಥಿಸುತ್ತೇನೆ.

# ರಾಮಗಿರಿ ಹೇಳಿಕೆ ಖಂಡಿಸಿ ಮುಸ್ಲಿಂ ಸಂಘಟನೆಗಳಿಂದ ಪ್ರತಿಭಟನೆ

**ಜಮಖಂಡಿ :** ಪ್ರವಾದಿ ಮೊಹಮ್ಮಜ ಮತ್ತು ಇಸ್ಲಾಂ ಧರ್ಮದ ವಿರುದ್ಧ ಅವಹೇಳನಾಕಾರ ಹೇಳಿಕೆ ನೀಡಿರುವ ಮಹಾರಾಷ್ಟ್ರದ ಧಾರ್ಮಿಕ ಮುಖಂಡ ರಾಮಗಿರಿ ಮಹಾರಾಜರ ವಿರುದ್ಧ ಕಠಿಣ ಕ್ರಮ ಜರುಗಿಸುವಂತೆ ಒತ್ತಾಯಿಸಿ ನಗರದ ವಿವಿಧ ಮುಸ್ಲಿಂಪರ ಸಂಘಟನೆಗಳು ಪ್ರತಿಭಟನೆ ನಡೆಸಿದರು.

ನಗರದ ಎ.ಜಿ.ದೇಸಾಯಿ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಕೆಲ ಕಾಲ ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಿದ ವಿವಿಧ ಮುಸ್ಲಿಂ ಸಂಘಟನೆಗಳು ನಂತರ ಗ್ರೇಡ್2 ತಹಶೀಲ್ದಾರ ಕೆ.ವೈ.ಬಿದರಿ ಅವರಿಗೆ ಮನವಿ ಸಲ್ಲಿಸಿದರು.

ಮೌಲಾನಾ ಅಲ್ತಾಫಖಾನ ಮದನಿ ಮಾತನಾಡಿ, ಪ್ರವಾದಿ ಹಜರತ್ ಮೊಹಮ್ಮದ್ ಪೈಗಂಬರ ಕುರಿತು ಮಹಾಂತ ರಾಮಗಿರಿ ಮಹಾರಾಜರು ನೀಡಿದ ಅವಹೇಳನಕಾರಿ ಹೇಳಿಕೆಯನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ.



ರಾಮಗಿರಿ ಮಹಾರಾಜ ಅವಹೇಳನಕಾರಿ ಭಾಷಣ ಮಾಡಿದ್ದು, ಅವರ ವಿರುದ್ಧ ಕಾನೂನು ರೀತಿ ಕಠಿಣ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಮೌಲಾನಾ ಇಸಾ ಇನಾಮದಾರ, ಮೌಲಾನಾ ಅನೀಸ್ ಡಾಂಗೆ, ಮೌಲಾನಾ ಮುಫ್ತಿ ಹಾರೂನ, ಮೌಲಾನಾ ಫಾರೂಕ, ಮೌಲಾನಾ ಮುಜಮ್ಮೀಲ ಶೇಖ, ಮೌಲಾನಾ ಅಲ್ತಾಫಖಾನ ಮದನಿ, ಮೌಲಾನಾ ಸರ್ಫರಾಜ, ರಾಜೆಸಾಬ ತಾಳಿಕೋಟಿ, ಖಿಜರ ಪೆಂಡಾರಿ, ಖಾಜಾಆಮೀನ ಕಂಕಣಪೀರ, ರಫೀಕ ಕಲಾದಗಿ, ಝಾಕೀರಹುಸೇನ ನಧಾಪ, ಅಬ್ದುಲ ಜಮಾದಾರ, ಸಮೀರ ಕಂಗನೊಳ್ಳಿ, ಅನ್ವರ ಮೋಮಿನ, ಮುಬಾರಕ ಅಪರಾದ, ನಸರೋದ್ದಿನ ಜಮಾದಾರ, ಉಸ್ಮಾನಸಾಬ ದಿಲಾವರ, ಮಕ್ಬೂಲ ಅಥಣಿಕರ, ರಾಜು ಮಸಳಿ, ಗುಡುಸಾಬ ಹೊನವಾಡ, ಮುಸ್ತಾಕ ಝುಂಡೆ, ಅಯ್ಯುಬ ಗದಗ, ಅಸ್ಗರಅಲಿ ಝುಂಡೆ ಸಹಿತ ಹಲವರು ಇದ್ದರು.

# ಮೊಹಮ್ಮದ ರಫಿ ರವರ ಗಾಯನ ಮನಸ್ಸಿಗೆ ಉಲ್ಲಾಸ ನೀಡುತ್ತದೆ: ಡಾ. ಓಂಕಾರ್



**ಕೊಪ್ಪಳ :** ಮಹಾನ್ ಗಾಯಕ ದಿ , ಮೊಹಮ್ಮದ್ ರಫಿ ರವರ ಗಾಯನ ಪ್ರತಿಯೊಬ್ಬ ಮನುಷ್ಯನ ಮನಸ್ಸಿಗೆ ಮದ ಮತ್ತು ಉಲ್ಲಾಸ ನೀಡುತ್ತದೆ ಅವರ ಗಾಯನ ಕೇಳಿದರೆ ಮನಸ್ಸಿಗೆ ಶಾಂತಿ ನೆಮ್ಮದಿ ದೊರೆಯುತ್ತದೆ ಎಂದು ಕೊಪ್ಪಳ ಜಿಲ್ಲಾ ಸಾರ್ವಜನಿಕ ಆಸ್ಪತ್ರೆಯ ಜಿಲ್ಲಾ ಸರ್ಜನ್ ಡಾ. ಓಂಕಾರ ಹೇಳಿದರು.

ಅವರು ಶನಿವಾರ ಸಂಜೆ ನಗರದ ಸಾಹಿತ್ಯ ಭವನದಲ್ಲಿ ಕೊಪ್ಪಳದ ಮೊಹಮ್ಮದ್ ರಫಿ ಮೆಲೋಡಿಸ್ ತಂಡ ಏರ್ಪಡಿಸಿದ ರಸಮಂಜರಿ ಕಾರ್ಯಕ್ರಮ ದ ಉದ್ಘಾಟನೆ ನೆರವೇರಿಸಿ ಮಾತನಾಡಿದರು, ಗಾಯಕ ಮೊಹಮ್ಮದ್ ರಫಿ ರವರು ಬಹುಭಾಷಾ ಗಾಯಕರಾಗಿದ್ದರು ಅವರ ಗಾಯನದಲ್ಲಿ ನಮ್ಮ ದೇಶದ, ನಾಡಿನ ಸಂಸ್ಕೃತಿ ಅಡಗಿದೆ. ಪ್ರತಿಯೊಬ್ಬರನ್ನು ಆಕರ್ಷಿಸುವ ಕಂಠ ಅವರು ಹೊಂದಿದ್ದರು ಇಂದಿನ ಗಾಯಕರಿಗೆ ಅವರು ಒಬ್ಬ ಮಾದರಿ ಗಾಯಕರು ಅವರ ವ್ಯಕ್ತಿಗತ ಜೀವನ ಕೂಡ ಅಷ್ಟೇ ಮಾದರಿ ಯಾಗಿ–ತ್ತು ಇಂದಿನ ಯುವ ಪೀಳಿಗೆಗೆ ಗಾಯನ ಕ್ಷೇತ್ರದಲ್ಲಿ ಅವರು ಒಬ್ಬ ದೊಡ್ಡ ವಿಶ್ವವಿದ್ಯಾಲಯ ಇದ್ದಂತೆ ಎಂದವರು ,ಕೊಪ್ಪಳದಲ್ಲಿ ಕೂಡ ಇಂತಹ ಸಾಂಸ್ಕೃತಿಕ ರಸಮಂಜರಿ ಕಾರ್ಯಕ್ರಮ ನೀಡುವಂತಹ ಕಲಾವಿದರು ಮತ್ತು ಪ್ರೋತ್ಸಾಹಿಸುವ ಕಲಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ ಅವರೆಲ್ಲರಿಗೆ ನಾವುಗಳು ಪ್ರೋತ್ಸಾಹಿಸುವ ಕೆಲಸ ಮಾಡಬೇಕು ಎಂದು ಜಿಲ್ಲಾ ಸಜನ್ ಡಾ. ಓಂಕಾರ ಹೇಳಿದರು.

ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಎಂ ಸಾಧಿಕ ಅಲಿ ನಗರಸಭೆಯ ಮಾಜಿ ಸದಸ್ಯ ಹಾಗೂ ಅಲ್ಪಸಂಖ್ಯಾತ ಸಮುದಾಯದ ಮುಖಂಡ ಎಂ ಪಾಷಾ ಮಾನ್ವಿ ಇನ್ನೂರು ಮುಖಂಡ ಹುಸೇನ್ ಪೀರ ಮುಜಾವರ್, ಹಿರಿಯ ಕಲಾವಿದ ಭಾಷಾ ಹಿರೇಮನಿ, ರಫಿ,

ಅಲಿ, ದ್ಯಾಮಣ್ಣ ಕರಿಗಾರ ಮುದಿಯಪ್ಪ ಅಡಿವೆಳ್ಳಿ ಅನೇಕರು ಮುಖ್ಯ ಅತಿಥಿಗಳಾಗಿ ವೇದಿಕೆ ಮೇಲೆ ಪಾಲ್ಗೊಂಡಿದ್ದರು ಇದೇ ವೇಳೆ ಕೊಪ್ಪಳದ ಗಾಯಕ ಮೊಹಮ್ಮದ್ ರಫಿ ಡಾ. ಮಾಜಿದ್, ದಾವುದ ಹುನುಗುಂದ್ ಮನೋಜ್ ವಸ್ತ್ರದ್, ರುಕ್ಸನಾ ತಳಕಲ್, ಅನೇಕರು ವಿವಿಧ ಹಾಡನ್ನು ಹಾಡುವುದರ ಮೂಲಕ ರಸಮಂಜರಿ ಕಾರ್ಯಕ್ರಮ ನಡೆಸಿಕೊಟ್ಟರು ಹುಬ್ಬಳ್ಳಿಯ ಎ ಎ ದೇಸಾಯಿ ಮಿಮಿಕ್ರಿ ಹಾಸ್ಯ ದ ರಸದೌತಣ್ಣ ನೀಡಿದರು, ರಸಮಂಜರಿ ಕಾರ್ಯಕ್ರಮ ಜನಮ ನಾರಂಜಿಸಿತು.

# ವಿದ್ಯಾರ್ಥಿಗಳು ಮೊದಲು ಮಾನವಂತರಾಗಬೇಕು: ಸಾಹಿತಿ ಮಂಗಿ

**ಮೂಡಲಗಿ :** ವಿದ್ಯಾರ್ಥಿಗ ಳಲ್ಲಿ ಮೊಬೈಲ ಸದುಪಯೋಗವಾಗಬೇಕು ವಿನಃ ದುರುಪಯೋಗ ವಾಗಬಾರದು.ಕಲೆ.ಸಂಸ್ಕೃತಿ.ದ್ಯಾನ ಪರಿಶ್ರಮಗಳ ಸಯಹೋಗದಲ್ಲಿ ಮಾನವನಾಗಬೇಕು. ಹುಟ್ಟುವಾಗ ಯಾರು ಪಂಡಿತರಾಗಿರುವದಿಲ್ಲ. ಕಠಿಣ ಪರಿಶ್ರಮ.ಸಂಕಲ್ಪ ಮಾಡಿದಾಗಮಾತ್ರಸಾಧನೆಎಂದು ಗೋಕಾಕದ ಸಾಹಿತಿ ಮಹಾಲಿಂಗ ಮಂಗಿ ಹೇಳಿದರು.



ಗುರುವಾರ ಸಮೀಪದ ಕಲ್ಲೋಳಿಯ ಬಸವೇಶ್ವರ ಶಿಕ್ಷಣ ಸಂಸ್ಥೆ ಹಾಗೂ ಅಂಗ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ 2024–25 ನೇ ಸಾಲಿಗೆ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮ, ಬಿ.ಎ 2ನೇ & 4ನೇ ಸೆಮಿಸ್ಟರ್ ವಿದ್ಯಾರ್ಥಿಗಳ ಸಾಂಸ್ಕೃತಿಕ, ಕ್ರೀಡೆ ಹಾಗೂ ಎನ್ ಎಸ್ ಎಸ್ ಚಟುವಟಿಕೆಗಳ ಸಮಾರೋಪ ಸಮಾರಂಭ ಹಾಗೂ ಪತ್ರಿಕಾ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿಗಳು ತಮ್ಮ ಮನಸ್ಸನ್ನು ಅಭಿವೃದ್ಧಿಪಡಿಸಲು ಮತ್ತು ಆಸಕ್ತಿ ಹೊಂದಿರುವ ವಿಷಯಗಳನ್ನು ಕಂಡುಕೊಳ್ಳಲು ಎಲ್ಲಾ ಸಂಪನ್ಮೂಲಗಳನ್ನು ಹುಡುಕಲು ಮೊಬೈಲ ಅವಶ್ಯ, ಆದರೂ ಅಂತಹ ತಂತ್ರಜ್ಞಾನವು ಒಡ್ಡುವ ಅಪಾಯಗಳ ಬಗ್ಗೆ ನಾವು ಜಾಗರೂಕರಾಗಿಬೇಕು ಎಂದ ಅವರು ಗುರಿ ಇರಬೇಕು ಆತ್ಮ ಶೋಧನೆ ಮಾಡಿಕೊಳ್ಳಬೇಕು. ವಿದ್ಯಾರ್ಥಿಗಳು ಹಂಸಕ್ಷಿರಣೆಯಾಗಬೇಕು. ಶಿಕ್ಷಣ ಸಂಸ್ಥೆಯಲ್ಲಿಯೇ ವಿದ್ಯಾರ್ಥಿಗಳ ಜೀವನ ಅಡಗಿದೆ. ವಿದ್ಯಾರ್ಥಿಗಳಲ್ಲಿ ಮಾನವಿಯತೆ ಇರದಿದ್ದರೆ ವಿದ್ಯೆ ಕಲಿತರು ಅದು ವಿಫಲ ಎಂದರು.

ಪತ್ರಕರ್ತ ಅರುಣಕುಮಾರ ಬಣಗಾರ ಮಾತನಾಡಿ. ವಿದ್ಯಾರ್ಥಿಗಳಲ್ಲಿ ಶೃದ್ದೆಯ ಕೊರತೆಯಿಂದ ಯಶಸ್ವಿಯಾಗಲು ಸಾದ್ಯವಾಗುವದಿಲ್ಲ.ಗುರುಗಳ ಶಿಕ್ಷಕರ ತಂದೆ ತಾಯಿ ಮೇಲೆ ಗೌರವ ಕಡಿಮೆ ಆಗುತ್ತಿದೆ. ವಿದ್ಯೆ ಕಲಿ ಬಯಸುವರ ಹತ್ತಿರ ಶೃದ್ದೆ. ಗೌರವ ಹಾಗೂ ಏಕಾಗ್ರತೆ ಇದ್ದರೆ ಮಾತ್ರಸಾದ್ಯ,ತಂದೆತಾಯಿಯನ್ನು ಗೌರವಿಸಿದಷ್ಟು ನೀಮ್ಮ ಜೀವನ ಎತ್ತರಕ್ಕೆ ಏರುತ್ತದೆ ಎಂದರು,

ಸಂಸ್ಥೆಯ ಕಾರ್ಯದರ್ಶಿ ಡಾ ಭೋಜರಾಜ ಬೆಳಕೂಡ ಅದ್ಯಕ್ಷತೆ ವಹಿಸಿ ಮಾತನಾಡಿ. ವಿದ್ಯೆಯ ಜೊತೆಗೆ ಕ್ರೀಡೆ ಮುಖ್ಯ. ಸಾಮಾಜಿಕ ವಲಯದಲ್ಲಿ ನಮ್ಮನು ನಾವು ತೊಡಗಿಸಿಕೊಳ್ಳುವದರಿಂದ ವ್ಯಕ್ತಿ ನಿರ್ಮಾಣ ಆಗುವರಿಂದ ನಾಯಕತ್ವದ ಗುಣ ಬೆಳೆಸಿ ಕೊಳ್ಳಬೇಕು ಎಂದರು.

ಪತ್ರಕರ್ತ ಚಂದ್ರಕಾಂತ ಪತ್ತಾರ ಮಾತನಾಡಿದರು. ಆಡಳಿತಾಧಿಕಾರಿ ಪ್ರಕಾಶ ಗರಗಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯ ಮೇಲೆ ಮೂಡಲಗಿ. ಕಲ್ಲೋಳಿ ಹಾಗೂ ಘಟಪ್ರಭಾ ಪತ್ರಕರ್ತರು ಇದ್ದರು.ಕಾಲೇಜಿನ ಪ್ರಾಚಾರ್ಯ ಎಸ್ ಬಿ ಮನ್ನಿಕೇರಿ.ಶಿಕ್ಷಕರಾದ ಜಿ ಆರ್ ಕಡಕಭಾಂವಿ. ಉದಯ ಗುಡ್ಯೆನ್ನವರ.ಆರ್ ಬಿ ಹೆಬ್ಬಾಳ, ಜ್ಯೋತಿ ಮುತ್ನಾಳ ಇದ್ದರು.



**ಗದಗ : ಗದಗ್ ನಗರ ಮುಳಗುಂದ ರೋಡ್ ಪತ್ತೆಪುರ್ ಬಿಲ್ಡಿಂಗ್‌ನಲ್ಲಿ ಶ್ರೀ ಪಂಡಿತ್ ಪುಟ್ಟರಾಜ್ ಚೈನಿಸ್ ಕಾರ್ನರ್ ಅಂಗಡಿ ಪ್ರಾರಂಭ ಮಾಡಲಾಯಿತು. ವಿರೇಶ್ವರ ಪುಣ್ಯಾಶ್ರಮದ ಪರಮಪೂಜ್ಯ ಶ್ರೀ ಕಲ್ಲಯ್ಯಜ್ಜ ಗವಾಯಿಗಳವರ ಸಾನಿಧ್ಯದಲ್ಲಿ ಶ್ರೀ ಮಹಾಮಹಾಲಕ್ಷ್ಮಿ ಪೂಜೆ ಕಾರ್ಯಕ್ರಮ ಮತ್ತು ಶ್ರೀ ಡಾ ಪಂಡಿತ್ ಪುಟ್ಟರಾಜ ಗವಾಯಿಗಳವರ ಭಾವಚಿತ್ರ ಮುಖರ್ಪಣೆ ಮಾಡಲಾಯಿತು.**

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State